# ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 32 ಆಗಸ್ಟ್ 9, 1981 ಬೆಲೆ : 60 ಪೈಸೆ


## ಶ್ರೀ ಇಬ್ರಾಹಿಂರವರ ರಾಜೀನಾಮೆ

ರಾಜ್ಯಾದ್ಯಂತ ಒಂದು ಬಿರುಗಾಳಿಯನ್ನೆಬ್ಬಿಸಿ, ಎಲ್ಲ ವಿಭಾಗದ ಜನತೆಯ ವಿರೋಧಕ್ಕೆ ಗುರಿಯಾಗಿ, ಇಂದಿರಾ ಕಾಂಗ್ರೆಸ್ ಪಕ್ಷದ ಹೆಸರಿಗೆ ಮಸಿ ಬಳಿಯಲು ಕಾರಣೀಭೂತರಾದ ಶ್ರೀ ಸಿ. ಎಂ. ಇಬ್ರಾಹಿಂರವರು ಸಚಿವಸಂಪುಟಕ್ಕೆ ಕೊಟ್ಟ ರಾಜೀನಾಮೆಯನ್ನು ಮುಖ್ಯಮಂತ್ರಿ ಶ್ರೀ ಗುಂಡೂರಾಯರು ಸ್ವೀಕರಿಸಿ ಈ ಸಮಸ್ಯೆ ವಿಕೋಪಕ್ಕೆ ಹೋಗುವುದನ್ನು ಸದ್ಯ ತಪ್ಪಿಸಿದಂತಾಗಿದೆ. ಕೋರ್ಟಿನಲ್ಲಿ ಚಾರ್ಜ್‌ಶೀಟ್ ದಾಖಲಾದಾಗ ಮಂತ್ರಿಯವರ ರಾಜೀನಾಮೆ ಕೇಳುತ್ತೇನೆ, ಎಫ್. ಐ. ಆರ್. ದಾಖಲಾದಾಗಲ್ಲವೆಂಬುದಾಗಿ ಮುಖ್ಯಮಂತ್ರಿಯವರು ತೆಗೆದುಕೊಂಡ ನಿಲುವಿಗೆ ಸೋಲಾಗಿ, ಈಗಲೇ ರಾಜೀನಾಮೆ ಕೊಡಬೇಕೆಂಬ ವಿರೋಧ ಪಕ್ಷಗಳ ನಿಲುವಿಗೆ ಜಯವಾಗಿದೆ. ಇದೊಂದು ಮಹತ್ವದ ಘಟನೆಯೆನ್ನಬಹುದು.

ಶ್ರೀ ಇಬ್ರಾಹಿಂರವರ ಬಗ್ಗೆ ಹಲವಾರು ಭ್ರಷ್ಟಾಚಾರಗಳ ದೂರುಗಳು ಪತ್ರಿಕೆಗಳಲ್ಲೂ ಶಾಸನಸಭೆಗಳಲ್ಲೂ ಬಂದಿದ್ದವು. ಅವರ ಬಂಧುಗಳ ವರ್ತನೆಯಂತೂ ಮಂತ್ರಿಯಾದವರಿಗಷ್ಟೇ ಅಲ್ಲದೆ ಸಾಮಾನ್ಯ ವ್ಯಕ್ತಿಗೂ ಸಹ ಕಳಂಕ ತರುವಂಥವುಗಳಾಗಿದ್ದವು. ಇವೆಲ್ಲಾ ಪತ್ರಿಕೆಗಳಲ್ಲಿ ಬರುತ್ತಿದ್ದು ಶ್ರೀ ಇಬ್ರಾಹಿಂರವರ ಬಗ್ಗೆ ಕರ್ನಾಟಕದ ಜನತೆಯಲ್ಲಿ ವಿರೋಧ

### ಸಂಪಾದಕೀಯ

ಭಾವನೆ ಬೆಳೆಯಿತು. ಕರ್ನಾಟಕದ ಶ್ರೀ ಗುಂಡೂರಾಯರ ಮಂತ್ರಿಮಂಡಲ ಭ್ರಷ್ಟ ಮಂತ್ರಿಗಳಿಂದ ತುಂಬಿದೆಂದು ವಿರೋಧ ಪಕ್ಷಗಳು ಸಾರುತ್ತಿದ್ದಾಗ ಶ್ರೀಮತಿ ರೇಣುಕಾರಾಜೇಂದ್ರನ್‌ರವರ ಪ್ರಕರಣ ಹೊರಗೆ ಬಂದು ಅವರು ರಾಜೀನಾಮೆ ಕೊಡಬೇಕಾಯಿತು. ಅದರ ಬೆನ್ನಿನಲ್ಲೇ ಭದ್ರಾವತಿ ಪ್ರಕರಣವೂ ಹೊರಬಂದು ಎಫ್. ಐ. ಆರ್.ನಲ್ಲಿ ಶ್ರೀ ಇಬ್ರಾಹಿಂರವರ ಹೆಸರೂ ಸಹ ಇರುವುದು ಗೊತ್ತಾಯಿತು. ಇದೇ ಸಮಯದಲ್ಲಿ ಶಾಸನಸಭೆಯು ಸೇರಿದ್ದರಿಂದ ಈ ಪ್ರಶ್ನೆಗೆ ಆದ್ಯಗಮನ ದೊರೆತು ವಿರೋಧಪಕ್ಷಗಳು ಇದನ್ನು ಚರ್ಚಿಸಲು ಮೊದಲೇ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು. ಇದಕ್ಕೆ ಅವಕಾಶ ಸಿಗದಿದ್ದಾಗ ಒತ್ತಾಯಪಡಿಸಿದ್ದಕ್ಕೆ ಶಾಸನಸಭೆಯ ಅಧಿವೇಶನದ ಕಾಲಕ್ಕೆ ಹೊರಹಾಕಲ್ಪಟ್ಟರು. ಇದರಿಂದ ಕುಪಿತಗೊಂಡ ಜನತೆ ರಾಜ್ಯಾದ್ಯಂತ ಬಂದ್ ಮಿತ್ತಿತರ ಪ್ರತಿಭಟನೆಯನ್ನು ತೋರಿಸಿತು. ಆಳುವ ಪಕ್ಷವೊಂದೇ ಭಾಗವಹಿಸುತ್ತಿದ್ದ ಶಾಸನಸಭೆ ನಡೆಯಿತು. ಆದರೆ ಕ್ರಮೇಣ ಪ್ರತಿಭಟನೆಯು ತೀವ್ರವಾಗುತ್ತಾ ಬಂದುದರಿಂದ ಇದರ ಒತ್ತಡವು ದಿಲ್ಲಿಯ ಮಟ್ಟದ ಮೇಲೂ ಬಿದ್ದುದರಿಂದ ಇಬ್ರಾಹಿಂರವರು ರಾಜೀನಾಮೆ ಕೊಡಬೇಕಾಯಿತು. ಇದು ನ್ಯಾಯಕ್ಕೆ, ಸತ್ಸಂಪ್ರದಾಯಕ್ಕೆ ದೊರೆತ ಜಯ.

ಇದರಲ್ಲಿ ವ್ಯಕ್ತಿ ಪ್ರಶ್ನೆಯಾಗಲಿ, ಜಾತಿ ಪ್ರಶ್ನೆಯಾಗಲಿ ಯಾವುದೂ ಇರಲಿಲ್ಲ. ಇದಕ್ಕೆ ಜಾತಿಯ ಬಣ್ಣ ಕೊಡುವುದರಲ್ಲಿ ಅರ್ಥವಿಲ್ಲ. ಇದಕ್ಕೆ ಯಾರಾದರೂ ಪ್ರಯತ್ನ ಮಾಡಿದರೆ ಅದು ಖಂಡನೀಯ.

[ಕಡೇ ಪುಟ ನೋಡಿ]

### ಕಾಂಗ್ರೆಸ್ (ಯು)ವಿನಲ್ಲಿ ಒಡಕು

# ಪ್ರತಿಸ್ಪರ್ಧಿ ಎ.ಐ.ಸಿ.ಸಿ.ಗೆ ರಾಮ್ ಅಧ್ಯಕ್ಷ

ಪಕ್ಷಾಂತರದ ಪ್ರವಾಹದಿಂದ ಚೆಲ್ಲಾಪಿಲ್ಲಿಯಾಗುತ್ತಿದ್ದಂತೆಯೇ ನಿಜವಾದ ಕಾಂಗ್ರೆಸ್ ಅದು ಅಲ್ಲವೆಂದು ಚುನಾವಣಾ ಆಯೋಗವಿತ್ತ ತೀರ್ಪಿನ ಆಘಾತದಿಂದ ತತ್ತರಿಸುತ್ತಲಿದ್ದ ಕಾಂಗ್ರೆಸ್ (ಯು)ಗೆ ಮತ್ತೊಂದು ಆಘಾತವಾಗಿದೆ. ಪಕ್ಷದ ಹಿರಿಯ ಮುಂದಾಳು ಶ್ರೀ ಜಗಜೀವನರಾಮ್ ಅವರ ನೇತೃತ್ವದಲ್ಲಿ ಪ್ರತಿಸ್ಪರ್ಧಿ ಕಾಂಗ್ರೆಸ್ (ಯು) ಸ್ಥಾಪನೆಯಾಗುವುದರೊಂದಿಗೆ ಪಕ್ಷದಲ್ಲಿ ಒಡಕುಂಟಾಗಿದೆ. ಪಕ್ಷದ ಮುಖಂಡತ್ವವು ಸರ್ವಾಧಿಕಾರಿ ರೀತಿಯಲ್ಲಿ ಕೆಲಸವೆಸಗುತ್ತಿರುವುದರ ವಿರುದ್ಧ ತಾನು ಈ ಕ್ರಮವನ್ನು ಅನುಸರಿಸಬೇಕಾಗಿಬಂದಿದೆ ಎಂದು ರಾಮ್ ಹೇಳಿದ್ದಾರೆ.

ಮುಖ್ಯವಾಗಿ ಉತ್ತರಪ್ರದೇಶ, ಬಿಹಾರ, ಮಧ್ಯ ಪ್ರದೇಶ, ಹರ್ಯಾಣ, ಪಂಜಾಬ್, ಒರಿಸ್ಸಾ ರಾಜ್ಯಗಳಿಂದ ಬಂದಿದ್ದ ಪ್ರತಿನಿಧಿಗಳು ಸೇರಿ ನಡೆಸಿದ ಪ್ರತಿಸ್ಪರ್ಧಿ ಎ.ಐ.ಸಿ.ಸಿ.ಯು ರಾಮ್ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದೆ. ಶ್ರೀ ದೇವರಾಜ ಅರಸು ಅವರ ನೇತೃತ್ವದ ಕಾಂಗ್ರೆಸ್(ಯು) ಜಗಜೀವನರಾಮ್ ಅವರನ್ನು ಪಕ್ಷದಿಂದ ಅಮಾನತುಗೊಳಿಸಿದರೆ, ಶ್ರೀ ಜಗಜೀವನರಾಮ್ ಅವರ ನೇತೃತ್ವದಲ್ಲಿ ಸ್ಥಾಪಿತವಾಗಿರುವ ಕಾಂಗ್ರೆಸ್ ಅರಸು ಅವರನ್ನು ಅಧ್ಯಕ್ಷ ಸ್ಥಾನದಿಂದ ತೆಗೆದು ಹಾಕಿದೆ!

ಕಾಂಗ್ರೆಸ್(ಯು) ಪಕ್ಷವನ್ನು 15 ತಿಂಗಳುಗಳಲ್ಲಿ ಬಿಟ್ಟುಹೋಗಿರುವ ರಾಮ್ ಅವರು ಪಕ್ಷದ ಸಂವಿಧಾನವನ್ನು ಧಿಕ್ಕರಿಸಿ, ಪಕ್ಷದೊಳಗೆ ಆಂತರಿಕ ಪ್ರಜಾಪ್ರಭುತ್ವವನ್ನು ಗಾಳಿಗೆ ತೂರಿದ ಅರಸು ಅವರು ಶಿಕ್ಷಾರ್ಹರು ಎಂದಿದ್ದಾರೆ. ಪ್ರತಿಸ್ಪರ್ಧಿ ಎ.ಐ.ಸಿ.ಸಿ.ಗೆ ಹಾಜರಾದವರೆಲ್ಲರನ್ನೂ ಪಕ್ಷದಿಂದ ಅಮಾನತುಗೊಳಿಸಲು ಅರಸು ಅವರು ತೀರ್ಮಾನಿಸಿರುವರೆಂದು ಕಾಂಗ್ರೆಸ್(ಯು) ಪ್ರಧಾನಕಾರ್ಯದರ್ಶಿ ಬಂಕ್ ಬಿಹಾರಿದಾಸ್ ಹೇಳಿದ್ದಾರೆ. ಅಂತೂ ಯಾರು ಯಾರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವುದಕ್ಕಿಂತಲೂ ಮುಖ್ಯ ಪಕ್ಷವು ಸಂಪೂರ್ಣ ಛಿದ್ರವಾಗುವಂತೆ ಕಾಣುತ್ತಿದೆ. ಉತ್ತರ ಪ್ರದೇಶ ಮತ್ತು ಮಧ್ಯ ಪ್ರದೇಶಗಳಲ್ಲಿ ನಡೆದ ಪಕ್ಷದ ಸಂಘಟನಾ ಚುನಾವಣೆಗಳನ್ನು ಅನೂರ್ಜಿತಗೊಳಿಸಿದ ಕ್ರಮಗಳನ್ನು ವಿರೋಧಿಸುವುದರಿಂದ ಪ್ರಾರಂಭಗೊಂಡ ರಾಮ್ ಅವರ ಕ್ರಮವು ಈಗ ಪಕ್ಷವನ್ನು ಇಬ್ಭಾಗ ಮಾಡಿದೆ.

[ಕಡೇ ಪುಟ ನೋಡಿ]

### ಅಗತ್ಯ ಸೇವೆಗಳ ನಿರ್ವಹಣೆಯ ಸುಗ್ರೀವಾಜ್ಞೆಯ ವಿರುದ್ಧ

# ಆಗಸ್ಟ್ ೧೭ರಂದು ಕಪ್ಪುದಿನ ಆಚರಿಸಲು ಕರೆ

"ದೇಶದ ಅರ್ಥವ್ಯವಸ್ಥೆ ಮೊದಲಿಗಿಂತ ಈಗ ದೃಢವಾಗಿದೆ" ಎಂದು ಜುಲೈ 24ರಂದು ಶ್ರೀನಗರದಲ್ಲಿ ಪ್ರಧಾನಿ ಇಂದಿರಾ ಸಾರಿದ್ದರು. ಮೂರೇ ದಿನಗಳ ಅಂತರದಲ್ಲಿ ಅಗತ್ಯ ಸೇವೆಗಳಲ್ಲಿ ಮುಷ್ಕರಗಳನ್ನು ನಿಷೇಧಿಸುವ ಸುಗ್ರೀವಾಜ್ಞೆಯನ್ನು ಹೊರತರಲಾಯಿತು.

ದುಡಿಯುವ ಜನರ ಹಕ್ಕನ್ನು ತುಳಿಯಲು ಹೊರಟಿರುವ ಈ ಸುಗ್ರೀವಾಜ್ಞೆಯನ್ನು ಹಿಂತೆಗೆಯುವಂತೆ ಒತ್ತಾಯಿಸಿ ರಾಷ್ಟ್ರದಾದ್ಯಂತ ಪ್ರತಿಭಟನಾ ಅಲೆ ಎದ್ದಿದೆ. ರಾಷ್ಟ್ರದ ಪ್ರಮುಖ ಕೇಂದ್ರಕಾರ್ಮಿಕ ಸಂಘಟನೆಗಳಾದ CITU, AITUC, HMS, BMS, INTUC (Dara group), UTUC, UTUC (Lenin sarani), TUCCಗಳ ಪ್ರತಿನಿಧಿಗಳು ಜುಲೈ 28ರಂದು ದೆಹಲಿಯಲ್ಲಿ ಸಭೆಸೇರಿ ಆಗಸ್ಟ್ 17ರಂದು ರಾಷ್ಟ್ರದಾದ್ಯಂತ ಸುಗ್ರೀವಾಜ್ಞೆಯ ವಿರುದ್ಧ ಕಪ್ಪು ದಿನ (Black day) ಆಚರಿಸಲು ಕರೆ ನೀಡಿದ್ದಾರೆ.

1980 ಜನವರಿಯಲ್ಲಿ ಮತ್ತೆ ಅಧಿಕಾರಕ್ಕೆ ಬಂದ ಇಂದಿರಾ ಕಾಂಗ್ರೆಸ್ ಸರಕಾರ ಜನವಿರೋಧಿ ಧೋರಣೆಗಳನ್ನು ಅನುಸರಿಸುತ್ತಲೇ ಬಂದಿದೆ. ಈಗ ಹೊರಡಿಸಿರುವ ಸುಗ್ರೀವಾಜ್ಞೆಯನ್ನು ಶಾಸನವಾಗಿ ರೂಪಿಸಲು ಆಗಸ್ಟ್ 17ರಂದು ಪ್ರಾರಂಭವಾಗಲಿರುವ ಚಳಿಗಾಲದ ಪಾರ್ಲಿಮೆಂಟ್‌ನ ಅಧಿವೇಶನದಲ್ಲಿ ಮಂಡಿಸಲಿದೆ. ಭಾರತದ ಕಾರ್ಮಿಕವರ್ಗವನ್ನು ಜೀತದಾಳಿನಂತೆ ಪರಿವರ್ತಿಸಲಿರುವ ಈ ಸುಗ್ರೀವಾಜ್ಞೆಯನ್ನು ಮಾಲೀಕರು ಸ್ವಾಗತಿಸಿರುವುದು ಆಶ್ಚರ್ಯವೇನಿಲ್ಲ.

ಈ ಸುಗ್ರೀವಾಜ್ಞೆಯು ಅಸ್ತ್ರದಿಂದ ಕಾರ್ಮಿಕರ ವೇತನ ಸ್ತಂಭನ, ತುಟ್ಟಿ ಭತ್ತೆ ತಡೆಹಿಡಿಯುವುದಷ್ಟೇ ಅಲ್ಲ ಉಳಿದ ಸೌಲಭ್ಯಗಳ ಬಗ್ಗೆಯೂ ಚಕಾರವೆತ್ತದಂತೆ ಮಾಡಲು ಉದ್ದೇಶಿಸಿದೆ.

ನ್ಯಾಷನಲ್ ಕ್ಯಾಂಪೇನ್ ಕಮಿಟಿಯು ದೇಶದ ಎಲ್ಲ ಕಾರ್ಮಿಕ ಸಂಘಟನೆಗಳಿಗೆ ಈ ಸುಗ್ರೀವಾಜ್ಞೆಯನ್ನು ವಿರೋಧಿಸುವಂತೆ, ಆಗಸ್ಟ್ 17ರಂದು ಬೃಹತ್ ಮತಪ್ರದರ್ಶನ ಏರ್ಪಡಿಸಿ ಕಾರ್ಮಿಕವಿರೋಧಿ ಸುಗ್ರೀವಾಜ್ಞೆಗೆ ತಕ್ಕ ಉತ್ತರ ನೀಡಬೇಕು ಎಂದು ಮನವಿಮಾಡಿಕೊಂಡಿದೆ. ಅಲ್ಲದೇ ಕಾರ್ಮಿಕವರ್ಗದ ಮೇಲೆ ನಡೆಸಿರುವ ಸುವ್ಯವಸ್ಥಿತ ಹಲ್ಲೆಯನ್ನು ವಿರೋಧಿಸುವಂತೆ ದೇಶದ ಪ್ರಜಾಪ್ರಭುತ್ವ ಶಕ್ತಿಗಳಿಗೆ ಮನವಿ ಮಾಡಿಕೊಂಡಿದೆ.

### ಅಖಿಲಭಾರತ ದಿನ

ನವೆಂಬರ್ ಮೂರನೇ ವಾರದಲ್ಲಿ ನಡೆಯಲಿರುವ ಪಾರ್ಲಿಮೆಂಟ್ ಚಲೋ (March to Parliament) ಕಾರ್ಯಕ್ರಮಕ್ಕೆ ಪೂರ್ವಭಾವಿಯಾಗಿ ನವೆಂಬರ್ 3ರಂದು ಅಖಿಲಭಾರತ ದಿನಾಚರಣೆ ಆಚರಿಸಲು ನ್ಯಾಷನಲ್ ಕ್ಯಾಂಪೇನ್ ಕಮಿಟಿಯು ಕರೆ ನೀಡಿದೆ.

ಎನ್.ಸಿ.ಸಿ.ಯು ಈ ಸಭೆಯಲ್ಲಿ ಮೋದಿನಗರದ ಎಚ್. ಎಂ. ಎಸ್. ಧುರೀಣ ಕಾಂ. ಜಯಪ್ರಕಾಶರ ಹೇಯ ಕೊಲೆಯನ್ನು, ನಾಸಾದಡಿಯಲ್ಲಿ ಬಾಂಬೈಯ ಕಾರ್ಮಿಕ ಧುರೀಣ ಡಾ॥ ದತ್ತಾ ಸಾಮಂತರನ್ನು ಬಂಧಿಸಿರುವುದನ್ನು ಉಗ್ರವಾಗಿ ಖಂಡಿಸಲಾಯಿತು.

ಎನ್.ಸಿ.ಸಿ.ಯ ಕರ್ನಾಟಕ ರಾಜ್ಯ ಘಟಕವು 3-8-81ರಂದು ಬೆಂಗಳೂರಿನಲ್ಲಿ ಸಭೆಸೇರಿ ಆಗಸ್ಟ್ 17ರಂದು ಎಲ್ಲಾ ಕಾರ್ಮಿಕ-ನೌಕರರು ಕಪ್ಪು ಬ್ಯಾಜ್ ಧರಿಸಬೇಕೆಂದು, ಕಪ್ಪು ಬಾವುಟಗಳನ್ನು ಹಾರಿಸಬೇಕೆಂದೂ, ಗೇಟ್‌ಮೀಟಿಂಗ್, ಮೆರವಣಿಗೆ, ಬಹಿರಂಗ ಸಭೆಗಳನ್ನು ನಡೆಸಿ ಸರಕಾರಕ್ಕೆ ಮನವಿಕೊಡಬೇಕೆಂದೂ ಕರೆಕೊಟ್ಟಿದೆ.

o

# ಎಸ್. ಎಫ್. ಐ. ಚಟುವಟಿಕೆಗಳು :

## ಮೈಸೂರು

1-8-1981ರಂದು ಮೈಸೂರಿನ ಗಂಗೋತ್ರಿ ಆವರಣದಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ.) ಸಭೆಯು ರಾಜ್ಯ ಅಧ್ಯಕ್ಷರಾದ ಆರ್. ಜಯಕುಮಾರ್ ಅಧ್ಯಕ್ಷತೆಯಲ್ಲಿ ನಡೆಯಿತು. ನಗರದ ಬಹುತೇಕ ಶಾಲಾ-ಕಾಲೇಜುಗಳಿಂದ ಹಾಜರಿದ್ದ ಈ ಸಭೆಯಲ್ಲಿ 1981-82ನೇ ವರ್ಷದ ಸಾಲಿಗೆ ಮೈಸೂರು ನಗರದ ಸಂಘಟನಾ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಸಂಚಾಲಕರಾಗಿ ಎಸ್. ಜೆ. ಸಿ. ಇಂಜಿನಿಯರಿಂಗ್ ಕಾಲೇಜಿನ ಶ್ರೀ ಎಸ್. ಸಂಜಯ್‌ರವರು ಆಯ್ಕೆಯಾದರು. ಸಹ ಸಂಚಾಲಕರಾಗಿ ಶಾರದಾವಿಲಾಸ್ ಕಾನೂನು ಕಾಲೇಜಿನ ಶ್ರೀ ಬಿ. ಕೆ. ರಾಮಯ್ಯ ಮತ್ತು ಯುವರಾಜ ಕಾಲೇಜಿನ ಶ್ರೀ ಎಂ. ಎಸ್. ಅಶೋಕಕುಮಾರ್‌ರವರು ಮತ್ತು ಸಮಿತಿಯ ಸದಸ್ಯರುಗಳಾಗಿ ಶ್ರೀಯುತರಾದ ಜಯಸಿಂಹ, ಸಲೀಲ್, ಎಲ್. ಕುಮಾರ್, ರೋಬಿನ್, ರಾಧಕೃಷ್ಣ, ಎ. ಆರ್. ರಾಮಕೃಷ್ಣ, ಜಿ. ದೇಸಿಗೌಡ, ಗುರುಸ್ವಾಮಿ ಹಾಗೂ ಇರಾನಿ ವಿದ್ಯಾರ್ಥಿ ಕೆವಾನ್‌ರವರುಗಳು ಆಯ್ಕೆಯಾದರು.

ಸಭೆಯನ್ನು ಉದ್ದೇಶಿಸಿ ರಾಜ್ಯ ಎಸ್. ಎಫ್. ಐ. ಕಾರ್ಯದರ್ಶಿ ಶ್ರೀ ನರಸಿಂಹೇಗೌಡ ಮತ್ತು ರಾಜ್ಯಸಮಿತಿ ಸದಸ್ಯ ಶ್ರೀ ಬಿ. ಬಸವಲಿಂಗಪ್ಪರವರುಗಳು ಮಾತನಾಡಿ ಸಂಘಟನೆಯನ್ನು ಬಲಿಷ್ಠವಾಗಿ ಕಟ್ಟುವಂತೆ ಕೇಳಿಕೊಂಡರು.

## ಕೋಲಾರ

ದಿ. 26-7-81ರಂದು ಭಾನುವಾರ ಬೆಳಿಗ್ಗೆ ಚಿಂತಾಮಣಿಯಲ್ಲಿ ಕೋಲಾರ ಜಿಲ್ಲೆಯ ಪ್ರತಿನಿಧಿಗಳ ಸಭೆ ಸೇರಿ ಎಸ್. ಎಫ್. ಐ. ಜಿಲ್ಲಾ ಸಂಘಟನಾ ಸಮಿತಿಯನ್ನು ರಚಿಸಲಾಯಿತು. ಸಮಿತಿಯ ಸಂಚಾಲಕರಾಗಿ ಕಾಂ. ಹರೀಂದ್ರ ಮತ್ತು ಸಹ ಸಂಚಾಲಕರಾಗಿ ಕಾಂ. ವೀರಪ್ಪರೆಡ್ಡಿಯವರನ್ನು ಆಯ್ಕೆಮಾಡಲಾಯಿತು. ಸಮಿತಿಯಲ್ಲಿ ಒಟ್ಟು 13 ಮಂದಿ ಸದಸ್ಯರಿದ್ದಾರೆ.

ರಾಜ್ಯಸಮಿತಿಯ ತೀರ್ಮಾನಗಳನ್ನು ಜಾರಿಗೊಳಿಸಲು ಸಭೆಯು ಯೋಜನೆ ರೂಪಿಸಿತು. ಸೆಪ್ಟೆಂಬರ್ 1ರ ಬೆಂಗಳೂರು ರ್‍ಯಾಲಿಗೆ ಚಿಂತಾಮಣಿ, ಕೋಲಾರ ಮತ್ತಿತರ ಭಾಗಗಳಿಂದ ಸೈಕಲ್ ಜಾತಾ ಹೊರಡಿಸಲು ತೀರ್ಮಾನಿಸಲಾಯಿತು.

## ರಾಯಚೂರು

ದಿ. 2-8-81ರಂದು ರಾಯಚೂರಿನಲ್ಲಿ ಜಿಲ್ಲಾ ಪ್ರತಿನಿಧಿಗಳ ಸಭೆಸೇರಿ ಜಿಲ್ಲಾ ಸಂಘಟನಾ ಸಮಿತಿಯನ್ನು ರಚಿಸಲಾಯಿತು. 12 ಮಂದಿಯ ಸಮಿತಿಯ ಸಂಚಾಲಕರಾಗಿ ಕಾಂ. ಕೆ. ವಿರೂಪಾಕ್ಷ, ಸಹಸಂಚಾಲಕರಾಗಿ ಕಾಂ.ಕೆ. ಬಸವರಾಜು ಮತ್ತು ಹೆಚ್. ವಿ. ಗುಡಿಯವರು ಆಯ್ಕೆಯಾದರು. ಕಾಂ. ಮೀನಾಕ್ಷಿ ಸಮಿತಿಯ ಮಹಿಳಾ ಸದಸ್ಯೆಯಾಗಿ ಆಯ್ಕೆಯಾದರು.

ರಾಯಚೂರು, ಗಂಗಾವತಿ, ಸಿಂಧನೂರು, ಮತ್ತು ಹೊಸಪೇಟೆಗಳಿಂದ ಬೆಂಗಳೂರಿಗೆ ಸೆಪ್ಟೆಂಬರ್ 1ರ ರ್‍ಯಾಲಿಗೆ ಸೈಕಲ್ ಜಾಥಾ ಹೊರಡಿಸಲು ನಿರ್ಧರಿಸಲಾಯಿತು. ಡಿಸೆಂಬರ್ ತಿಂಗಳಿನಲ್ಲಿ ಜಿಲ್ಲಾ ಸಮ್ಮೇಳನವನ್ನು ನಡೆಸಲು ಯೋಜಿಸಲಾಗಿದೆ. ರಾಜ್ಯ ಸಮಿತಿಯ ತೀರ್ಮಾನಗಳು ಮತ್ತು ರಾಷ್ಟ್ರ ಚಳುವಳಿಯ ಕಾರ್ಯಕ್ರಮವನ್ನು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸಲು ತೀರ್ಮಾನಿಸಲಾಯಿತು.

## ಗಂಗಾವತಿ

ದಿ. 30-7-81ರಂದು ಸಂಜೆ ಎಸ್. ಎಫ್. ಐ. ಗಂಗಾವತಿ ಟೌನ್ ಕಮಿಟಿ ಆಶ್ರಯದಲ್ಲಿ ಬೃಹತ್ ಬಹಿರಂಗ ಸಭೆ ಜರುಗಿತು. ರಾಜ್ಯಸಮಿತಿಯ ಮಾಜಿ ಸದಸ್ಯ ಕಾಂ. ಎಂ. ಎಸ್. ಹಿರೇಮಠ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ದಲಿತ ಸಂಘರ್ಷ ಸಮಿತಿಯ ಪುಟಾಣಿ ಬಾಲಕರು ಕ್ರಾಂತಿ ಗೀತೆಯನ್ನು ಮೊಳಗಿಸಿದರು. ಟೌನ್ ಕಮಿಟಿ ಸದಸ್ಯ ಕಾಂ. ನಾಗೇಂದ್ರ ಜೋಷಿ ಸ್ವಾಗತ ಕೋರಿದರು. ರಾಜ್ಯ ಸಮಿತಿಯ ಪ್ರಧಾನಕಾರ್ಯದರ್ಶಿ ಎಸ್. ಆರ್. ಆರಾಧ್ಯನವರು ಮಾತನಾಡಿ ದೇಶದ ವಿದ್ಯಾರ್ಥಿ–ಯುವಜನ ಸಮುದಾಯವು ಎದುರಿಸುತ್ತಿರುವ 'ಶಿಕ್ಷಣ' ಮತ್ತು 'ಉದ್ಯೋಗ'ದ ಸಮಸ್ಯೆಗಳ ಹಿನ್ನೆಲೆಯಲ್ಲಿ ಎಸ್. ಎಫ್. ಐ. ಪ್ರಾರಂಭಿಸಿರುವ ರಾಷ್ಟ್ರ ಚಳುವಳಿಯ ಕಾರ್ಯಕ್ರಮದ ಮಹತ್ವವನ್ನು ವಿವರಿಸಿದರು. ಟೌನ್ ಕಮಿಟಿ ಸಂಚಾಲಕ ಕೆ. ವಿರೂಪಾಕ್ಷ ಮಾತನಾಡಿ ಗಂಗಾವತಿಯಲ್ಲಿ ಎಸ್. ಎಫ್. ಐ. ವಿದ್ಯಾರ್ಥಿಗಳು ಸಾಧಿಸಿರುವ ಜಯದ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿ ವಿದ್ಯಾರ್ಥಿಗಳು ಎದುರಿಸುತ್ತಿರುವ ಅನೇಕ ಸ್ಥಳೀಯ ಸಮಸ್ಯೆಗಳ ಬಗ್ಗೆ ಹೋರಾಡಲು ಎಸ್. ಎಫ್.ಐ. ಸಂಘಟನೆಯನ್ನು ಮತ್ತಷ್ಟು ಬಲಪಡಿಸಬೇಕೆಂದು ಕರೆ ನೀಡಿದರು. ಟೌನ್ ಕಮಿಟಿ ಸದಸ್ಯ ಕಾಂ. ಸೂಗೂರಪ್ಪನವರು ವಂದನಾರ್ಪಣೆ ಮಾಡಿದರು. ಘೋಷಣೆಗಳೊಂದಿಗೆ ಸಭೆ ಮುಕ್ತಾಯವಾಯಿತು.

## ಸಿಂಧನೂರು

ಎಸ್. ಎಫ್. ಐ. ಸಿಂಧನೂರು ಟೌನ್ ಕಮಿಟಿ ನೇತೃತ್ವದಲ್ಲಿ ರಾಯಚೂರು ಜಿಲ್ಲೆಯ ಸಿಂಧನೂರಿನ ವಿದ್ಯಾರ್ಥಿಗಳು ದಿ. 31-7-81ರಂದು ಸರ್ಕಾರಿ ಹಾಸ್ಟೆಲ್‌ನ ಬೇಡಿಕೆಗಾಗಿ ಶಾಲಾ-ಕಾಲೇಜುಗಳನ್ನು ಬಹಿಷ್ಕರಿಸಿ ಮೆರವಣಿಗೆ ನಡೆಸಿದರು. ಮೆರವಣಿಗೆಯ ನೇತೃತ್ವ ವಹಿಸಿದ್ದ ಕಾಂ. ಬಿ. ಲಿಂಗಪ್ಪ, ಹೆಚ್. ವಿ. ಗುಡಿ ಮತ್ತು ಶಂಕರ್‌ರವರು ಮಾರ್ಗ ಮಧ್ಯದಲ್ಲಿ ಭಾಷಣಗಳನ್ನುಮಾಡಿ ಸಾರ್ವಜನಿಕರಿಗೆ ಉದ್ದೇಶವನ್ನು ತಿಳಿಸಿದರು. ನಂತರ ತಹಸೀಲ್ದಾರ್‌ರವರ ಕಛೇರಿಯ ಮುಂದೆ ಬಹಿರಂಗ ಸಭೆ ನಡೆಸಿ ಮನವಿ ಅರ್ಪಿಸಲಾಯಿತು. ಬಹಿರಂಗ ಸಭೆಯಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಎಸ್. ಎಫ್. ಐ. ರಾಜ್ಯ ಸಮಿತಿ ಪ್ರಧಾನಕಾರ್ಯದರ್ಶಿ ಎಸ್. ಆರ್. ಆರಾಧ್ಯ ಮಾತನಾಡಿ ಮೂವತ್ನಾಲ್ಕು ವರ್ಷಗಳ ಆಡಳಿತ ನಡೆಸಿದ ಕಾಂಗ್ರೆಸ್ ಪಕ್ಷ ದೇಶದಲ್ಲಿ ಅನಕ್ಷರತೆ, ನಿರುದ್ಯೋಗದ ಸಮಸ್ಯೆಗಳನ್ನು ಪರಿಹರಿಸಲು ಸಂಪೂರ್ಣ ವಿಫಲವಾಗಿರುವುದರಿಂದ ವಿದ್ಯಾರ್ಥಿ–ಯುವಜನತೆಯು ತಮ್ಮ ಬೇಡಿಕೆಗಳಿಗಾಗಿ ನಿರ್ಣಾಯಕ ಹೋರಾಟ ನಡೆಸಬೇಕಾಗಿರುವುದು ಅನಿವಾರ್ಯವಾಗಿದೆ ಎಂದು ಹೇಳಿದರು. ಕಾಂ. ಬಿ. ಲಿಂಗಪ್ಪ ಸಿಂಧನೂರಿನಲ್ಲಿ ಹಾಸ್ಟೆಲ್ ಇಲ್ಲದಿರುವ ಸಮಸ್ಯೆಯ ಕುರಿತು ಮಾತನಾಡಿ ಸರ್ಕಾರಿ ಹಾಸ್ಟೆಲ್ ಪ್ರಾರಂಭಿಸುವಂತೆ ಒತ್ತಾಯಿಸಿದರು. ಆಗಸ್ಟ್ 1ರಂದು ಕಾಂ. ಎಸ್. ಆರ್. ಆರಾಧ್ಯ ಮತ್ತು ರಾಜ್ಯ ಕಾರ್ಯದರ್ಶಿ ಕಾಂ. ಕೆ. ಬಸವರಾಜುರವರು ಈ ಸಂಬಂಧದಲ್ಲಿ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿದರು.

## ಸವದತ್ತಿ

ಜುಲೈ 26ರಂದು ಸವದತ್ತಿ ಎಸ್. ಎಫ್. ಐ. ನ ಕಾರ್ಯಕಾರಿ ಸಮಿತಿ ಸಭೆ ಸೇರಿತ್ತು. ಅಂದಿನ ಸಭೆಯಲ್ಲಿ ಪಾರ್ಲಿಮೆಂಟ್ ಚಲೋ ಕಾರ್ಯಕ್ರಮ ಮತ್ತು ಹೊಸ ವರ್ಷದ ಸದಸ್ಯತ್ವದ ಕುರಿತು ಚರ್ಚೆಮಾಡಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

1) ಎಸ್. ಎಫ್. ಐ. ಕೇಂದ್ರ ಸಮಿತಿ ಕೊಟ್ಟ ಕರೆಯ ಮೇರೆಗೆ ಸವದತ್ತಿ ತಾಲ್ಲೂಕಿನಲ್ಲಿ ಸಾವಿರ ಸಹಿಗಳನ್ನು ಸಂಗ್ರಹಿಸಲು ತೀರ್ಮಾನಿಸಲಾಯಿತು.

2) ಪಾರ್ಲಿಮೆಂಟ್ ಚಲೋ ಅಂಗವಾಗಿ ರಾಜ್ಯ ಎಸ್.ಎಫ್.ಐ. ಕೊಟ್ಟ ಕರೆಯಮೇರೆಗೆ ಆಗಸ್ಟ್ 20 ರಂದು ವಿದ್ಯಾರ್ಥಿಗಳ ಒಂದು ಮಂತ ಪ್ರದರ್ಶನ ನಡೆಸಲು ತೀರ್ಮಾನಿಸಲಾಯಿತು.

3) ಹೊಸ ವರ್ಷಕ್ಕೆ 450ಸದಸ್ಯರನ್ನು ನೋಂದಾಯಿಸಬೇಕೆಂದು ಸಭೆ ನಿರ್ಣಯಿಸಿತು. ಈ ಸದಸ್ಯರ ಸಭೆಯನ್ನು ಆಗಸ್ಟ್ 2ನೇ ವಾರದಲ್ಲಿ ಜರುಗಿಸಿ ಹೊಸ ಪದಾಧಿಕಾರಿಗಳನ್ನು ಚುನಾಯಿಸಲು ತೀರ್ಮಾನಿಸಲಾಯಿತು.

ರಾಜ್ಯ ಸಮಿತಿ ಉಪಾಧ್ಯಕ್ಷರಾದ ಕಾಂ. ರುದ್ರಪ್ಪಕಾಯಿ ಪಾರ್ಲಿಮೆಂಟ್ ಚಲೋ ಕಾರ್ಯಕ್ರಮದ ವಿವರಣೆ ನೀಡಿ ವಿದ್ಯಾರ್ಥಿಗಳನ್ನು ಜಾತಿ, ಭಾಷೆ, ಪ್ರದೇಶದ ಆಧಾರದ ಮೇಲೆ ವಿಭಜಿಸಲು ಆಳುವವರ್ಗಗಳು ಹೂಡಿರುವ ಕುತಂತ್ರಗಳನ್ನು ಬಯಲಿಗೆಳೆಯಲು ಎಸ್.ಎಫ್.ಐ. 'ಸರ್ವರಿಗೂ ಶಿಕ್ಷಣ, ಸರ್ವರಿಗೂ ಉದ್ಯೋಗ'ದ ಘೋಷಣೆಯನ್ನು ಮುಂದಿಟ್ಟಿದೆ ಎಂದು ವಿವರಿಸಿದರು.

ಘಟಕದ ಅಧ್ಯಕ್ಷ ಕಾಂ. ಕೊಡ್ಲಿಮಠ ಅಧ್ಯಕ್ಷತೆ ವಹಿಸಿದ್ದರು.

## ದಾವಣಗೆರೆ

ದಾವಣಗೆರೆಯಲ್ಲಿ ವಿದ್ಯಾರ್ಥಿಗಳು ಸಭೆ ಸೇರಿ ನಗರದಲ್ಲಿ ಎಸ್.ಎಫ್.ಐ. ಘಟಕವನ್ನು ಸ್ಥಾಪಿಸಲು ನಿರ್ಧರಿಸಲಾಗಿದ್ದು, ಅದಕ್ಕಾಗಿ 6 ಜನರ ಸಂಘಟನಾ ಸಮಿತಿಯನ್ನು ಮಾಡಲಾಗಿದೆ. ತಕ್ಷಣ ಸದಸ್ಯತ್ವವನ್ನು ಪ್ರಾರಂಭ ಮಾಡುವುದಲ್ಲದೆ, ಸಹಿಸಂಗ್ರಹ ಚಳುವಳಿಯನ್ನು ಪ್ರಾರಂಭಿಸಲು ಅಂದಿನ ಸಭೆಯಲ್ಲಿ ನಿರ್ಣಯಿಸಲಾಯಿತು.

ರಾಜ್ಯಸಮಿತಿ ಉಪಾಧ್ಯಕ್ಷ ಕಾಂ. ರುದ್ರಪ್ಪಕಾಯಿ ಎಸ್.ಎಫ್.ಐ.ಕಾರ್ಯಕ್ರಮದ ವಿಶ್ಲೇಷಣೆ ನಡೆಸಿ ಎಸ್. ಎಫ್.ಐ.ಯನ್ನು ಪ್ರಬಲವಾಗಿ ಕಟ್ಟಲು ವಿದ್ಯಾರ್ಥಿಗಳಿಗೆ ವಿನಂತಿ ಮಾಡಿಕೊಂಡರು.

## ವಿದ್ಯಾರ್ಥಿ-ಯುವಜನ ಹೋರಾಟಸಮಿತಿಯ ಮೆರವಣಿಗೆ

ಆಗಸ್ಟ್ 1ರಂದು ರಾಯಚೂರಿನಲ್ಲಿ ವಿದ್ಯಾರ್ಥಿ-ಯುವಜನ ಹೋರಾಟ ಸಮಿತಿಯ ಕರೆಯ ಮೇರೆಗೆ ವಿದ್ಯಾರ್ಥಿಗಳು ಶಾಲಾ-ಕಾಲೇಜುಗಳನ್ನು ಬಹಿಷ್ಕರಿಸಿ ಮೆರವಣಿಗೆ ನಡೆಸಿದರು. 'ಇಬ್ರಾಹಿಂ ರಾಜೀನಾಮೆ ನೀಡಲಿ', 'ಗುಂಡೂರಾವ್ ಸರ್ಕಾರ ತೊಲಗಲಿ', 'ದಕ್ಷ ಪೋಲೀಸ್ ಅಧಿಕಾರಿಗಳಿಗೆ ರಕ್ಷಣೆ ನೀಡಿ', 'ಬೆಲೆ ಏರಿಕೆಗೆ ಧಿಕ್ಕಾರ', ಎಂಬ ಘೋಷಣೆಗಳನ್ನು ಕೂಗುತ್ತಾ ಹೊರಟ ವಿದ್ಯಾರ್ಥಿ-ಯುವಜನರು ಜಿಲ್ಲಾಧಿಕಾರಿಗಳ ಕಛೇರಿಯ ಆವರಣದಲ್ಲಿದ್ದ 'ಸತ್ಯಾಗ್ರಹ ಶಿಬಿರ'ದ ಬಳಿ ಸೇರಿದರು. ಹೋರಾಟ ಸಮಿತಿಯ ಮುಖಂಡರು ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿದರು. ಯುವಜನತಾ ಮುಖಂಡ ಶ್ರೀ ಲಿಂಗಯ್ಯಸ್ವಾಮಿ, ಡಿ.ವೈ.ಎಫ್.ಐ. ಮುಖಂಡ ಕಾಂ. ಗಂಗಾಧರ್ ಮತ್ತು ಎಸ್.ಎಫ್.ಐ. ರಾಜ್ಯ ಶಾಖೆ ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯರವರು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ಬೆಳಿಗ್ಗೆಯಿಂದ ಸಂಜೆ 5ಗಂಟೆಯವರೆಗೆ 'ಧರಣಿ ಸತ್ಯಾಗ್ರಹ' ನಡೆಸಲಾಯಿತು.

## ಎಸ್.ಎಫ್.ಐ. ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಳಿ ಸಭೆ ತೀರ್ಮಾನಗಳು

ಜುಲೈ 20, 21ರಂದು ಎಸ್. ಎಫ್.ಐ. ರಾಜ್ಯ ಕಾರ್ಯದರ್ಶಿ ಮಂಡಳಿ ಸಭೆಯು ಬೆಂಗಳೂರಿನಲ್ಲಿ ಜರುಗಿತು. ಸಭೆಯು ರಾಜ್ಯದ ರಾಜಕೀಯ ಬೆಳವಣಿಗೆಯ ಬಗ್ಗೆ ತೀವ್ರ ಚರ್ಚೆ ನಡೆಸಿ ಜನವಿರೋಧಿ ಗುಂಡೂರಾವ್ ಸರ್ಕಾರದ ವಿರುದ್ಧ ಬೆಳೆದು ಬರುತ್ತಿರುವ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಸಭೆಯು ಎಲ್ಲ ಶಾಖೆಗಳಿಗೆ ಕರೆ ನೀಡಿದೆ. ಈ ನಿರ್ಣಯದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಇತ್ತೀಚಿಗೆ ರಚಿತವಾಗಿರುವ 'ವಿದ್ಯಾರ್ಥಿ-ಯುವಜನ ಹೋರಾಟ ಸಮಿತಿ'ಗೆ ಎಸ್.ಎಫ್.ಐ. ಸ್ಪರ್ಧೆಯಾಗಿ ಬೆಂಬಲ ಸೂಚಿಸಿತು. ಜುಲೈ 23ರಂದು ಬೆಂಗಳೂರಿನಲ್ಲಿ ನಡೆದ ಹೋರಾಟ ಸಮಿತಿಯ ಸಭೆಯಲ್ಲಿ ಎಸ್. ಎಫ್. ಐ. ಪರವಾಗಿ ಕಾಂ. ಎನ್. ರಾಜಣ್ಣ ಮತ್ತು ಡಿ.ವೈ.ಎಫ್.ಐ. ಪರವಾಗಿ ಕಾಂ. ಶಿವರಾಂ ಭಾಗವಹಿಸಿದ್ದರು. ಈ ಸಭೆಯ ತೀರ್ಮಾನದಂತೆ ರಾಜ್ಯದಾದ್ಯಂತ ಆಗಸ್ಟ್ 1ರಂದು ಜಿಲ್ಲಾಧಿಕಾರಿಗಳ ಕಛೇರಿಗಳ ಮುಂದೆ ನಡೆದ ಧರಣಿಸತ್ಯಾಗ್ರಹದಲ್ಲಿ ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ. ಸಂಘಟನೆಗಳು ಹಲವಾರು ಕಡೆ ಸಕ್ರಿಯವಾಗಿ ಭಾಗವಹಿಸಿದ್ದವು. ಹೋರಾಟ ಸಮಿತಿಯ ಮುಂದಿನ ಕಾರ್ಯಕ್ರಮಗಳಿಗೂ ಬೆಂಬಲ ನೀಡುವಂತೆ ಎಸ್.ಎಫ್.ಐ. ಶಾಖೆಗಳಿಗೆ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯ ವಿನಂತಿಸಿದ್ದಾರೆ.

ಕಾರ್ಯದರ್ಶಿ ಮಂಡಳಿ ಸಭೆಯು ಕರ್ನಾಟಕ ಸರ್ಕಾರದ ಶಿಕ್ಷಣ ನೀತಿಯ ಬಗ್ಗೆ ತೀವ್ರ ವಿಮರ್ಶೆ ನಡೆಸಿ ಈ ಕೆಳಕಂಡ ನಿರ್ಣಯವನ್ನು ಅಂಗೀಕರಿಸಿತು.

ನೂತನ ಪದವಿ ಕಾಲೇಜುಗಳ ಪ್ರಾರಂಭಕ್ಕೆ ಅನುಮತಿ ನೀಡುವುದಿಲ್ಲವೆಂದು ರಾಜ್ಯ ಸರ್ಕಾರದ ವಿದ್ಯಾಮಂತ್ರಿಗಳು ಘೋಷಿಸಿದ್ದಾರೆ. ರಾಜ್ಯದಲ್ಲಿ ಸುಮಾರು 16ಸಾವಿರ ಏಕೋಪಾಧ್ಯಾಯ ಶಾಲೆಗಳಿದ್ದು ಉಪಾಧ್ಯಾಯರ ಕೊರತೆಯಿದ್ದರೂ ಟಿ.ಸಿ.ಎಚ್. ಕಾಲೇಜುಗಳಲ್ಲಿ ಪ್ರವೇಶಾವಕಾಶಗಳನ್ನು ಕಡಿತಗೊಳಿಸುವ ಕ್ರಮವನ್ನೂ ಸರ್ಕಾರವು ಕೈಗೊಂಡಿದೆ. 9ಸಾವಿರ ವಿದ್ಯಾರ್ಥಿಗಳಿಗಿದ್ದ ಅವಕಾಶವನ್ನು 3500ಕ್ಕೆ ಇಳಿಸಲಾಗಿದೆ. ಟಿ.ಸಿ.ಎಚ್. ಕಾಲೇಜಿಗೆ ಪ್ರವೇಶ ಕೋರಿ ಅರ್ಜಿ ಸಲ್ಲಿಸಲು ಕನಿಷ್ಟ ಶೇ. 45ರಷ್ಟು ಅಂಕ ಪಡೆದಿರಬೇಕೆಂಬ ನಿಯಮವನ್ನು ಸಹ ಜಾರಿಗೆ ತರಲಾಗಿದೆ. ಈ ರೀತಿ ಉನ್ನತ ಶಿಕ್ಷಣ ಮತ್ತು ವೃತ್ತಿಪರ ಶಿಕ್ಷಣದ ಅವಕಾಶಗಳನ್ನು ಕಡಿತಗೊಳಿಸುವ ಕರ್ನಾಟಕ ರಾಜ್ಯ ಸರ್ಕಾರದ ನೀತಿಯಿಂದ ಸ್ಪರ್ಧೆ ಹೆಚ್ಚಿ ಬಡ ವಿದ್ಯಾರ್ಥಿಗಳು ಈ ಅವಕಾಶದಿಂದ ವಂಚಿತರಾಗಿದ್ದಾರೆ. ಸರ್ಕಾರದ ಈ ವಿದ್ಯಾರ್ಥಿ ವಿರೋಧಿ ನೀತಿಯನ್ನು ಸಭೆಯು ಉಗ್ರವಾಗಿ ಖಂಡಿಸಿ ಇದರ ವಿರುದ್ಧ ಹೋರಾಡಲು ನಿರ್ಧರಿಸಿತು.

ಸದಸ್ಯತ್ವ ಚಳುವಳಿ, ಸಹಿಸಂಗ್ರಹ ಚಳುವಳಿ, ಸ್ಟೂಡೆಂಟ್ ಸ್ಟ್ರಗಲ್ ಚಂದಾದಾರರ ನೋಂದಾವಣೆ ಮತ್ತು ರಾಷ್ಟ್ರ ಚಳುವಳಿ ಕಾರ್ಯಕ್ರಮವನ್ನು ತೀವ್ರವಾಗಿ ಜಾರಿಗೊಳಿಸಲು ಸಭೆಯು ಶಾಖೆಗಳಿಗೆ ಮತ್ತೊಮ್ಮೆ ವಿನಂತಿಸಿದೆ. ರಾಜ್ಯದ ನಾನಾ ಭಾಗಗಳಿಂದ 'ಸೈಕಲ್ ಜಾತಾ' ಹೊರಟು ಪ್ರಚಾರ ನಡೆಸಿ ಸೆ. 1ರ ಬೆಂಗಳೂರು ರ್‍ಯಾಲಿಗೆ ಹೆಚ್ಚು ಮಂದಿಯನ್ನು ಕರೆತರಲು ಸಹ ಸಭೆ ನಿರ್ಧರಿಸಿದೆ.

# ಶಿಕ್ಷಣ ರಂಗದಲ್ಲಿ ಕ್ರಾಂತಿಕಾರಕ ತಿರುವು.....

ಎಸ್. ಎಸ್. ಹಿರೇಮಠ

ಯಜಮಾನ ಸಂಸ್ಕೃತಿಯು ದಬ್ಬಾಳಿಕೆ ಒಂದೇ ಮುಖದಿಂದ, ಒಂದೇ ರಂಗದಲ್ಲಿರುವುದಿಲ್ಲ. ಎಲ್ಲ ಮುಖಗಳಿಂದ ತನ್ನ ಕ್ರೂರ ನಾಲಗೆಗಳನ್ನು ಎಲ್ಲ ರಂಗಗಳಿಗೂ ಚಾಚಿ, ಚಾಚಿಕೊಳ್ಳುತ್ತಿರುತ್ತದೆ. ಶಿಕ್ಷಣರಂಗದಲ್ಲಿ ಅದು ಮಾಡುತ್ತಿರುವ ಅಪಾಯ ತನ್ನ ವರ್ಗಸ್ವಭಾವಕ್ಕೆ ಅನುಗುಣವಾಗಿಯೇ ಇದೆ. ಅದು ಉದ್ಧಾರದ ಪ್ರಗತಿಯ ಎಲ್ಲ ಮುಖವಾಡಗಳನ್ನು ಹಾಕಿಕೊಂಡು ಮೋಸಮಾಡುತ್ತಿರುತ್ತದೆ. ಇದಕ್ಕೆ ಪೂರಕವಾಗಿ ಪ್ರತಿಕ್ರಿಯಾವಾದಿಗಳು, ಪ್ರತಿಗಾಮಿಗಳು, ಉದಾರವಾದಿಗಳು, ಸುಳ್ಳು ಸಮಾಜವಾದಿಗಳೇ ಮೊದಲಾದ ಹಲವು 'ವಾದಿಗಳು' ಅಪಾಯಕಾರಿಯಾದ ತಮ್ಮ ಕೊಡುಗೆ ಸಲ್ಲಿಸುತ್ತಲೇ ಇರುತ್ತಾರೆ. ಪ್ರಗತಿಶೀಲ ಲೇಬಲ್ಲಿನಲ್ಲಿ ಬರುತ್ತಿರುವ ಧೀಮಂತರ ಪತ್ರಿಕೆಗಳಲ್ಲಿ ಆನುಚೂನಾಗಿ ಈ ಅಪಾಯ ಹರಿದು ಬರುತ್ತಲೇ ಇದೆ.

ನಾಡಿನ ಭವಿಷ್ಯ ನಿರ್ಮಾಣದಲ್ಲಿ ಯುವಪೀಳಿಗೆಯನ್ನು ಸಿದ್ಧಗೊಳಿಸುವ ಶಿಕ್ಷಣದ ಪಾತ್ರ ಅಪಾರವಾದುದು. ನಮ್ಮಂಥ ರಾಷ್ಟ್ರಗಳಿಗೆಬೇಕಾಗುವ ಶಿಕ್ಷಣದ ಬಗ್ಗೆ ಆಲೋಚಿಸಿದ ಜನ ಈಗಿರುವ ಶಿಕ್ಷಣ ಪದ್ಧತಿಯನ್ನು ಬದಲಿಸಬೇಕೆಂಬ ತುಕ್ಕುಹಿಡಿದ ಚರ್ಚೆ, ವಾದ, ವಿವಾದ, ವರದಿ, ಹೇಳಿಕೆಗಳನ್ನು ಎಲ್ಲ ಹಂತಗಳಲ್ಲೂ ಕೊಡುತ್ತಲೇ ಇದ್ದಾರೆ. ಪ್ರಾಥಮಿಕ ಹಂತದಿಂದ, ವಿಶ್ವವಿದ್ಯಾಲಯದ ಉನ್ನತ ಹಂತಗಳವರೆಗೂ ಪಠ್ಯಗಳನ್ನು ರೂಪಿಸುವವರ ಯೋಗ್ಯತೆ, ದೃಷ್ಟಿಕೋನ, ಮನೋಭಾವವನ್ನು ಪಠ್ಯಗಳು ಬಿಂಬಿಸುತ್ತವೆ. ಇಷ್ಟಲ್ಲದೆ ಇವರನ್ನು ನಿಯಂತ್ರಿಸಲು ಸರಕಾರ ಮತ್ತೆಮತ್ತೆ ಕೈ ಹಾಕುತ್ತಲೇ ಇರುತ್ತದೆ. ಮತ್ತೊಂದು ಕಡೆ ಪಶ್ಚಿಮ ಬಂಗಾಲ ಪ್ರಗತಿಪರ ಸರಕಾರ ಪಠ್ಯದಲ್ಲಿ ವಿಚಾರಪರತೆ ತಂದರೆ ಪ್ರತಿಗಾಮಿಗಳು ಚಳುವಳಿ ಹೂಡುತ್ತಾರೆ!

ವೈಜ್ಞಾನಿಕ, ಪ್ರಗತಿಪರ, ಪ್ರಜಾಪ್ರಭುತ್ವೀಯ, ಜಾತ್ಯಾತೀತ, ಸಮಾಜವಾದಿ ಉನ್ನತ ಮಾನವೀಯ ಮೌಲ್ಯಗಳನ್ನುಳ್ಳ ಪಠ್ಯಗಳನ್ನು ಅಳವಡಿಸುವ ಖಚಿತ ನಿಲವು ಇಟ್ಟುಕೊಳ್ಳಲೇಬೇಕು.

ಆದರೆ ಯಾವ ಪ್ರಗತಿಪರ ಕೆಲಸಗಳೂ ಹೋರಾಟಗಳಿಲ್ಲದೆ ಜಾರಿಗೆ ಬರಲಾರವೆಂಬುದು ಸತ್ಯ. ಜಗತ್ತಿನ ಕಾರ್ಮಿಕರ ಅಲ್ಲಲ್ಲಿನ ನಿರಂತರ ಹೋರಾಟಗಳ ಮಾತುಕತೆ ಸರಕಾರಗಳು ಕಾರ್ಮಿಕ ಕಾಯಿದೆಗಳನ್ನು ರೂಪಿಸುತ್ತ ಬಂದ ಒತ್ತಾಯಕ್ಕೊಳಗಾದುವಲ್ಲವೆ ಹಾಗೆ; ಪ್ರಗತಿಪರ ವೈಜ್ಞಾನಿಕ ಧೋರಣೆಯ ವಿದ್ಯಾರ್ಥಿ ಸಮುದಾಯಗಳು, ಸಂಘಟನೆಗಳು, ಈ ದಿಸೆಯಲ್ಲಿ ಹೋರಾಟ ಮಾಡಬೇಕಾದ ಅಗತ್ಯವಿದೆ.

ಹೋದಸಲ ಕರ್ನಾಟಕ ಮಾಧ್ಯಮಿಕ ಶಾಲಾ ಶಿಕ್ಷಕರ ಹೋರಾಟದಲ್ಲಿ "ವೈಜ್ಞಾನಿಕ ಶಿಕ್ಷಣ" ಪಠ್ಯಗಳ ಬಗ್ಗೆ ಒಂದು ಬೇಡಿಕೆ ಇದ್ದುದನ್ನು ಗಮನಿಸಿದರೆ, ಈ ದಿಸೆಯಲ್ಲಿ ಶಿಕ್ಷಕರೂ ಹೋರಾಟಕ್ಕಿಳಿದಿರುವುದು ಶುಭಸೂಚಕವಾಗಿದೆ. ಇದೆಲ್ಲ ಸುಸಂಘಟಿತ ರೂಪದಲ್ಲಿ ಇನ್ನೂ ತೀವ್ರವಾಗಿ ಖಚಿತವಾಗಿ ಮುನ್ನಡೆದಾಗಲೇ ಶಿಕ್ಷಣ ರಂಗದಲ್ಲಿ ಒಂದು ಕ್ರಾಂತಿಕಾರಕ ತಿರುವು ಉಂಟಾದೀತು.

ಅನೇಕ ಚರ್ಚಾರ್ಹ ಪ್ರಶ್ನೆಗಳನ್ನು ಒಳಗೊಂಡಿದ್ದರೂ ಎಸ್ಸೆಸ್ಸೆಲ್ಸಿಯ ಇತಿಹಾಸ ಮತ್ತು ಪೌರನೀತಿ ವಿಷಯದ ಪಠ್ಯಪುಸ್ತಕವು ಗಮನಾರ್ಹವಾದ ಪ್ರಗತಿಪರ ಗ್ರಂಥವೆನಿಸಿತು.

"ಆಧುನಿಕ ದೃಷ್ಟಿಯಲ್ಲಿ, ಪಠ್ಯಪುಸ್ತಕದ ಆಯಾಮ ವಿಸ್ತರಿಸಿ" ಕೊಂಡು, "ಆಧುನಿಕ ಜೀವನದ ಅವಶ್ಯಕತೆಗಳನ್ನು ಅನುಲಕ್ಷಿಸಿ ವಿಜ್ಞಾನ, ಸಮಾಜಶಾಸ್ತ್ರ, ಕ್ರೀಡಾರಂಗ, ಜನಪದ ಸಾಹಿತ್ಯ ಹಾಗೂ ಆದರ್ಶವ್ಯಕ್ತಿಗಳ ಜೀವನಚಿತ್ರಗಳನ್ನು ಕುರಿತು ಪಾಠಗಳನ್ನು" ಒಳಗೊಂಡು, "ಇಂದಿನ ವಿದ್ಯಾರ್ಥಿಗಳ ವಿಚಾರಪರತೆ, ಸಾಹಿತ್ಯಕ ಅಭಿರುಚಿ, ಸೃಜನಾತ್ಮಕ ಕ್ರಿಯಾಶೀಲತೆಯನ್ನು ರೂಪಿಸಲು" ಎಂದೆಲ್ಲಾ "ಆದರ್ಶ ಸಾಧನೆಯ" ಬೃಹತ್ ಉದ್ದೇಶ ಇಟ್ಟುಕೊಂಡಿದ್ದೇವೆಂದು ಹೇಳಿಕೊಂಡು, ಈ ವರ್ಷ ಹೊಸದಾಗಿ ಹೊರಬಂದ ಪಿ.ಯು.ಸಿ. ಪ್ರಥಮವರ್ಷದ (ನನಗೆ ನೇರ ಸಂಬಂಧಿಸಿದ್ದರಿಂದ) ಕನ್ನಡ ಪಠ್ಯ "ಸಾಹಿತ್ಯ ಮಣಿದೀಪ"ದ ವಿಶ್ಲೇಷಣೆಯನ್ನು ಮೇಲಿನ ಅದರೆಲ್ಲ ಹೇಳಿಕೆಗಳ, ಘೋಷಣೆಗಳ ಹಿನ್ನೆಲೆಯಲ್ಲೇ ಮಾಡಲು ಯತ್ನಿಸಬೇಕೆಂದುಕೊಂಡೆ. 15 ಗದ್ಯ 9 ಪದ್ಯಗಳನ್ನು ಒಳಗೊಂಡ 'ಸಾಹಿತ್ಯ ಮಣಿದೀಪ'ದ ಇಡೀ ವಿಶ್ಲೇಷಣೆ ನಮ್ಮ ಸದ್ಯದ ಮಿತಿಗೆ ಕಷ್ಟಸಾಧ್ಯ.

ಈ ಹಿಂದೆ ನಾನು ವಿಶ್ಲೇಷಣೆ ಬರೆದ 'ಎರಡು ಗಿಳಿಗಳ ಕಥೆ' (ಸಮುದಾಯ ವಾರ್ತಾಪತ್ರ)ಯ ಲೇಖಕ ದುರ್ಗಸಿಂಹ ಬರೆದ ಇನ್ನೊಂದು 'ಶಿವಭೂತಿಯ ಕಥೆ' ಈ ಸಂಗ್ರಹದಲ್ಲಿದೆ. ಇದರ ಬಗ್ಗೆ ಇಲ್ಲಿ ಬರೆಯುತ್ತೇನೆ.

ಸಂಪಾದಕರು, 'ಇಲ್ಲಿ ಆರಿಸಲಾಗಿರುವ ಶಿವಭೂತಿಯ ಕಥೆಯಲ್ಲಿ ನೀಚನಿಗೆ ಎಷ್ಟೇ ಉಪಕಾರ ಮಾಡಿದರೂ, ಅವನು ಅಪಕಾರವನ್ನು ಮಾಡದೇ ಬಿಡ ಎಂಬ ನೀತಿ ಪ್ರತಿಪಾದಿತವಾಗಿದೆ' ಎಂದೂ (ಪುಟ 77), 'ಹಾವಿಗೆ ಹಲ್ಲಿನಲ್ಲಿ ವಿಷ, ಚೇಳಿಗೆ ಕೊಂಡಿಯಲ್ಲಿ ವಿಷ, ದುಷ್ಟ ಮಾನವನ ಮೈ ಎಲ್ಲಾ ವಿಷ. ಹಾವಿನ, ಚೇಳಿನ ವಿಷಕ್ಕೆ ಮದ್ದುಂಟು, ಆದರೆ ದುಷ್ಟ ಮಾನವನ ದುರ್ಬುದ್ಧಿಗೆ ಮದ್ದಿಲ್ಲ' ಎಂದೂ (ಪುಟ 73) ಮೂಲ ಲೇಖನದ ಆಶಯದ ಜಾಡಿನಲ್ಲೇ ವಿದ್ಯಾರ್ಥಿ, ಅಧ್ಯಾಪಕರ ದಿಕ್ಕು ತಪ್ಪಿಸಲು ಯತ್ನಿಸಿದ್ದಾರೆ.

ಈ ಪಾಠದಲ್ಲಿ ತರ್ಕಕ್ಕೆ ಒಳಪಡಬೇಕಾದ ಹಲವಾರು ಚರ್ಚಾಸ್ಪದ ಸಂಗತಿಗಳು, ಕಥೆಯಿರುವ ಮೂಲಭೂತ ಧೋರಣೆಯನ್ನು ಪ್ರಶ್ನೆ ಮಾಡುತ್ತವೆ. ಮತ್ತು ಪುರೋಹಿತಶಾಹಿ, ಯಜಮಾನ ಸಂಸ್ಕೃತಿಯ, ಮೋಸ, ದಬ್ಬಾಳಿಕೆಗಳನ್ನು ಒಳಗೊಂಡು ಮೇಲ್ನೋಟಕ್ಕೆ ಶ್ರೇಷ್ಠತ್ವದ ಮುಖವಾಡ ಹೊತ್ತಿದೆ.

ಮೂಲಕಥೆ ಈ ರೀತಿ ಇದೆ; (ಸಂಕ್ಷಿಪ್ತವಾಗಿ). ಒಂದು ಮಹಾರಣ್ಯದಲ್ಲಿ ಕಂಬಳಕನೆಂಬ ಬೇಡನನ್ನು ಹುಲಿ ಬೆನ್ನಟ್ಟಿ ಬರಲು ಆತ ಪ್ರಾಣಭಯದಿಂದ ದಿಕ್ಕುತೋಚದೆ ಪಾಳುಬಾವಿಗೆ ಬಿದ್ದ. ಕೋಪಾಂಧ ಹುಲಿಯೂ ಬೆನ್ನಟ್ಟಿಬಂದು ಅಲ್ಲೇ ಬಿತ್ತು. ಚಪಲಕನೆಂಬ ಕಪಿ ನೀರು ಕುಡಿಯಲು ಬಂದು, ಬಳ್ಳಿಯೆಂದು ತಿಳಿದು ಜೋತ ಸರ್ಪವನ್ನು ಹಿಡಿದಿಳಿಯಲು ಹೋಗಿ ಅವೂ ಸಹಿತ ಬಿದ್ದವು. ಅಷ್ಟರಲ್ಲಿ ದಯಾನಿಲಯನಾದ ಶಿವಭೂತಿ ಎಂಬ ಬ್ರಾಹ್ಮಣ, ತೀರ್ಥಯಾತ್ರೆಗೆಂದು ಬರುತ್ತ, ನೀರಡಿಕೆಯಾಗಿ, ತನ್ನ ಪಾತ್ರೆಯನ್ನು ಬಳ್ಳಿಗೆ ಕಟ್ಟಿ ಜಗ್ಗುವಾಗ, ಹುಲಿ ಹಿಡಿಯಿತು. ಅದನ್ನು ಹೊರತೆಗೆದು ಬಿದ್ದ ಕಾರಣ ಕೇಳಿದ. ಅದು ತಾನು, ಬೇಡ, ಹಾವು, ಮಂಗ ಬಿದ್ದ ಕಾರಣ ಹೇಳಿತು. ನಿಮ್ಮಡಿಯ ಕೃಪೆಯಿಂದ ಬದುಕಿದೆ. ಈ ಪರ್ವತದ ಗುಹೆಯಲ್ಲಿರುವೆ, ಬನ್ನಿ ನಿಮಗೆ ಅಮೂಲ್ಯ ವಸ್ತುಗಳನ್ನು ಕೊಡುವೆ ಎಂದಿತು. ಬ್ರಾಹ್ಮಣ ನೀನು ಹೇಳಿದ ಪ್ರಾಣಿಗಳನ್ನು ಹೊರತೆಗೆದು ತೀರ್ಥಯಾತ್ರೆ ಮುಗಿಸಿ ಬರುವಾಗ ಬರುವೆ ಎನ್ನುತ್ತಾನೆ. ಆಗ ಹುಲಿ ಹಾಗಾದರೆ ಬೇಡನನ್ನು ತೆಗೆಯಬೇಡಿ. ನೀಚರಿಗೆ ಉಪಕಾರ ಮಾಡಿದರೂ ಒಳ್ಳೆಯದು ಮಾಡಲಾರ. ಹೇಗೆಂದರೆ (ಸಂಸ್ಕೃತ ಶ್ಲೋಕ ಹೇಳುತ್ತೆ) ಹಾವಿಗೆ ಹಾಲನೆರೆದರೆ ವಿಷ ಹೆಚ್ಚುವಂತೆ......

ಆ ಬ್ರಾಹ್ಮಣ ಮಂಗ ಹಾವುಗಳನ್ನು ಹೊರತೆಗೆದ, ಅವೂ ಕೃತಜ್ಞತೆ ಅರ್ಪಿಸಿ 'ಭಕ್ತಿ ಮಾಡುವೆ, ದೇವರ ಸೇವೆ ಮಾಡುವೆ ಬನ್ನಿ' ಎಂದು ತಿಳಿಸಿ ಹೋದವು. ಪರೋಪಕಾರ ವ್ಯಸನನಾಗಿ, ಪಕ್ಷಪಾತ ಬೇಡವೆಂದು, ಶರೀರ ಪರಾರ್ಥವೆಂದು ಭಾವಿಸಿ, ಪರೋಪವಿಭೂತಿಯಾದ ಆ ಶಿವಭೂತಿ ದುರಾತ್ಮನೆನ್ನದೆ ಕಿರಾತನನ್ನು ಹೊರತೆಗೆದ. ಪರಹಿತ ನಿರತನಾದ ಅವನಿಗೆ ಬೇರೆ ತಿಳಿಯಲಿಲ್ಲ. ಕಿರಾತ ನಮಸ್ಕರಿಸಿ, 'ನಿಮ್ಮ ಧರ್ಮದಿಂದ ಬದುಕಿದೆ, ಪದ್ಮನಗರದಲ್ಲಿರುವೆ, ಅಲ್ಲಿ ಬನ್ನಿ, ಉಪಕಾರ ಸಲ್ಲಿಸುವೆ' ಎಂದು ಹೇಳಿಹೋದ.

ಶಿವಭೂತಿ, ತೀರ್ಥಯಾತ್ರೆ ಮುಗಿಸಿ ಮರಳುತ್ತ ಹುಲಿಯನ್ನು ಕಂಡ. ಅದು ಹಾರ, ಕುಂಡಲ, ಕಿರೀಟ, ಮುಂತಾದ ಅಮೂಲ್ಯ ಆಭರಣಗಳನ್ನು ಕೊಟ್ಟು ಉಪಚರಿಸಿತು. ಆತ ಪರಮವಿಭೂತಿಗೆ ಆಸ್ಪದನಾದೆ ಎಂದು ಸಂತಸಪಡುತ್ತ, ಮಂಗನನ್ನು ಕಂಡ. ಅದು ಹಲಸು ಮಾವು ಮುಂತಾದ ಹುಪಲ ಕೊಟ್ಟುಪಚರಿಸಿತು. ಪದ್ಮನಗರಕ್ಕೆ ಬೇಡನಲ್ಲಿಗೆ ಬಂದ. ಉಪಚರಿಸಲಿಕ್ಕೂ ಗತಿಯಿಲ್ಲದ ಕಿರಾತ ಸುಮ್ಮನಿರಲು, ಬ್ರಾಹ್ಮಣ, "ಏನು ಮಗನೆ ಚಿಂತಿಸುತ್ತಿರುವೆ' ಎಂದರೆ, ಆತ 'ನಿಮ್ಮಡಿ ಬಿಜಯ ಮಾಡಿಸಿದ್ದೀರಿ. ನಾನು ನಿರುಪಾಯ ಎಂದಾಗ, ಬ್ರಾಹ್ಮಣ 'ಚಿಂತೆ ಬೇಡ ನಿನಗೆ ಬಾಳುವ ಉಪಾಯ ಮಾಡುವೆ' ಎಂದು ಏಕಾಂತದಲ್ಲಿ ಕುಳಿತು, ತನ್ನ ಅಮೂಲ್ಯ ವಸ್ತುಗಳನ್ನು ತೋರಿಸಿದ.

ತನಗೆ ಹಿತ ಮಾಡುವ ಬ್ರಾಹ್ಮಣನೆಂದು ತಿಳಿಯದೆ, ಅವಿವೇಕಿಯಾಗಿ, ಬೇಡ ಅಹಿತವನ್ನೇ ಬಯಸಿದ, ಕೃತಘ್ನರು, ಏನು ಮಾಡರು?

ಬೇಡ ಪಟ್ಟಣದ ಅರಸನಲ್ಲಿಗೆ ಹೋಗಿ, ದೇವಾ ನಿಮ್ಮ ಧರಿಸುವಾಭರಣಗಳನ್ನು ತಂದು, ನನ್ನ ಮನೆಯಲ್ಲಿ ಬ್ರಾಹ್ಮಣನೊಬ್ಬನಿದ್ದಾನೆ ಎಂದಾಗ ಅರಸ ತಳವಾರರ ಮೂಲಕ ಶಿವಭೂತಿಯನ್ನು ಹೆಡಗೈಕಟ್ಟಿ ಹಿಡಿತರಿಸಿ ಜೇಲಿಗಟ್ಟಿದ. ತನ್ನ ಹುಚ್ಚತನಕ್ಕೆ ತಾನೆ ನಕ್ಕುಕೊಂಡು, ತನಗೆ ಬಿಡುಗಡೆ ಹೇಗೆಂದು ಚಿಂತಿಸಿ, ಶಿವಭೂತಿ, ಹಾವನ್ನು ಸ್ಮರಿಸಿದ. ಅದು ಬಂದಾಗ, ಆತ 'ಈ ಪಟ್ಟಣವನ್ನಾಳುವ ಅರಸ ನನ್ನ ಧನವನ್ನೆಲ್ಲ ಕಸಗೊಂಡಲ್ಲದೆ, ನನ್ನನ್ನು ಸೆರೆಗಿಟ್ಟ, ಇದಕ್ಕೆ ಯೋಗ್ಯವಾದುದನ್ನು ನೀನೇ ಬಲ್ಲೆ' ಎಂದ. ಇದಾವ ದೊಡ್ಡ ಸಂಗತಿ, ಅಂತ ಹಾವು, ಉಪಾಯ ಹೇಳಿ ಅರಸನ ಹಿರಿಯ ಮಗನನ್ನು ಮಿತ್ರಕಾರ್ಯಕ್ಕಾಗಿ ಕಚ್ಚಿತು. ಗಾರುಡಿಗರಿಂದಲೂ ಬದುಕಿಸಲಾಗದಿರಲು, ಬೇಡಿದ್ದು ಕೊಡುವ ಆಶೆ ಹಚ್ಚಿ ಕುವರನನ್ನು ಬದುಕಿಸಲು ಡಂಗುರ ಸಾರಿಸಿದ. ಶಿವಭೂತಿ ಹಾವು ಹೇಳಿದ ಪ್ರಕಾರ ನೀರನ್ನು ಮಂತ್ರಿಸಿ ಸಿಂಪಡಿಸಿದಾಗ, ಕುವರ ಎದ್ದ. ಅರಸ ಶಿವಭೂತಿಗೆ 'ಪಿರಿದು ವಿಭೂತಿ' (ಮರ್ಯಾದೆ)ಯನ್ನು ಮಾಡಿ, ಕಿರಾತನಿಂದ ಆದ ಅವಸ್ಥೆ ಕೇಳಿ ಕಿರಾತನನ್ನು ಯಮಪುರಕ್ಕೆ ಕಳಿಸಿದ.

ವಿಶ್ವ ಸಾಹಿತ್ಯ ಪ್ರಪಂಚದಲ್ಲಿ ಭಾರತದ ಗೌರವ ಎತ್ತಿಹಿಡಿಯುವ ಪಂಚತಂತ್ರದ ಕಥೆಗಳು ಇಂಥವು.

ಈ ಕಥೆಯಲ್ಲೇ ಕೆಲವು ತರ್ಕಗಳನ್ನು ಮಾಡುವುದರ ಮೂಲಕ ಇದು ಹೀಗೆ ಮಾಡುತ್ತದೆಂಬುದನ್ನು ನೋಡಬಹುದು.

1) ಕಂಬಳಕ ಬೇಡನನ್ನು ಅಪರಾಧಿಯಾಗಿಸಿ, 'ಕೃತಘ್ನ', ದುಷ್ಟ, ನೀಚ ಎಂದೆಲ್ಲಾ ಹೇಳಲು ಹೊರಟಿದೆ ಕಥೆ.

ಬೇಡನನ್ನು ಹುಲಿ ಅಟ್ಟಿಸಿಕೊಂಡು ಬರುತ್ತದೆ. ಪ್ರಾಣಭಯದಿಂದ ದೆಸೆಗಾಣದೆ ಬೇಡ ಬಾವಿಗೆ ಬಿದ್ದನಷ್ಟೇ. ಆದರೆ ಬ್ರಾಹ್ಮಣನ ಸಹಾಯದಿಂದ ಮೇಲೆ ಬಂದ ಹುಲಿ ಬ್ರಾಹ್ಮಣನಿಗೆ ಏನು ಹೇಳುತ್ತದೆ? 'ನೀಚ ಆತ ಅವನನ್ನು ತೆಗೆಯಬೇಡಿ', ಇತ್ಯಾದಿ ಉಪದೇಶಿಸಿದೆ. ಕೊಲ್ಲಲು ಬೆನ್ನಟ್ಟಿ ಬಂದ, ಹುಲಿ ನೀಚನೊ? ಪ್ರಾಣಭಯದಿಂದ ಬಾವಿಗೆಬಿದ್ದ ಬೇಡನೊ? ಹುಲಿ ಬೇಡನ ಬಗ್ಗೆ ನೀಚ, ಕೃತಘ್ನ ಎಂದು ಹೇಳಲು ಏನು ಆಧಾರ? ಏನು ಅನುಭವ? ಹುಲಿಯನ್ನು ಕೊಲ್ಲಲಿಕ್ಕೆ ಹೋಗಿದ್ದ ಬೇಡ, ಎಂದಾದರೆ, ಈ ಕೆಲಸವನ್ನು ನಿರ್ದಿಷ್ಟಗೊಳಿಸಿದ್ದು ಯಾವ ಧರ್ಮಶಾಸ್ತ್ರ? ಅದೇ ಪುರೋಹಿತಶಾಹಿ ಪರಂಪರೆಯಲ್ಲವೆ? (ಮನುಸ್ಮೃತಿ, ಯಾಜ್ಞವಲ್ಕ್ಯ ಸ್ಮೃತಿ ನೋಡಬಹುದು)

ಹುಲಿ ಬ್ರಾಹ್ಮಣ ಲೇಖಕನ ಮನೋಭಾವದ ಸೃಷ್ಟಿಯಾದ್ದರಿಂದ, ಹುಲಿಯೂ ಬ್ರಾಹ್ಮಣಪರ ದೃಷ್ಟಿಯುಳ್ಳದ್ದಾಗಿದೆ. ಬೇಡರ ಬಗ್ಗೆ ಲೇಖಕನದು ಪೂರ್ವಗ್ರಹಿತ ದೃಷ್ಟಿ.

2) ಎಲ್ಲ ಪ್ರಾಣಿಗಳು ಬಾವಿಗೆ ಬಿದ್ದದ್ದು ಹೇಗೆಂದು ಹುಲಿಗೆ ಬ್ರಾಹ್ಮಣ ಕೇಳಿದಾಗ, ಅದು 'ಬಿದ್ದ ಕಾರಣವನ್ನು ಹೇಳಿ' ಎಂದಷ್ಟೇ ನಿರೂಪಿಸಿ ಲೇಖಕ ಜಾರಿಕೊಳ್ಳುತ್ತಾನೆ.

3) ಬೇಡನನ್ನು ಅಟ್ಟಿದ ಹುಲಿ, ಬ್ರಾಹ್ಮಣನನ್ನು 'ಬ್ರಾಹ್ಮಣ'ನೆಂದು ಗುರುತಿಸುವುದು, ಬ್ರಾಹ್ಮಣರ ಶ್ಲೋಕವನ್ನು ಹೇಳುವುದು, ಲೇಖಕನ ಅಂತರಂಗವನ್ನು ಬಯಲುಮಾಡುವುದು.

4) ಕಥೆ ಬ್ರಾಹ್ಮಣನನ್ನು ಕರುಣಾರಸಾರ್ದ್ರ ಹೃದಯ, ಪರೋಪಕಾರಿ, ಭೂಸುರ ಮುಂತಾದ ವಿಶೇಷ ಗೌರವ ಪಕ್ಷಪಾತಗಳಿಂದ ಗುರುತಿಸಿದೆ. ಪ್ರಾಣಿಗಳೂ ದೇವರೆಂದು ಶಿವಭೂತಿಯನ್ನು ಗೌರವಿಸುವವು.

5) ಹುಲಿ ಜೀವವುಳಿಸಿದ ಉಪಕಾರಕ್ಕೆ ಪ್ರತಿಯಾಗಿ ಬ್ರಾಹ್ಮಣನಿಗೆ ಕೊಡುವ ಕಿರೀಟಾದಿ ಅಮೂಲ್ಯ ಆಭರಣಗಳು ಎಲ್ಲಿಂದ ಹೇಗೆ ಬಂದವು? ಇದಕ್ಕೆ ಕಥೆಯಲ್ಲಿ ಉತ್ತರವಿಲ್ಲ. ಕಿರೀಟಾದಿಗಳನ್ನು ರಾಜರು ಮಾತ್ರ ಧರಿಸುತ್ತಾರಷ್ಟೇ. ಇವುಗಳ ಬಗ್ಗೆ ಶಿವಭೂತಿಗೂ ಯೋಚನೆ ಹುಟ್ಟುವದಿಲ್ಲ. ಬದಲು ಖುಷಿಯಾಗುತ್ತಾನೆ.

6) ಕಿರಾತನಿಗೆ ಬ್ರಾಹ್ಮಣ ತಾನು ತಂದ ಕಿರೀಟಾದಿಗಳನ್ನು ಏಕಾಂತದಲ್ಲಿ ಕುಳಿತು ತೋರಿಸುತ್ತಾನೆ. ಇದರಿಂದ ನಮಗೆ ಹುಟ್ಟುವ

[7ನೇ ಪುಟ ನೋಡಿ]

ಯಾವುದೇ ವಿಚಾರದಲ್ಲಿ ಯಾವುದಾದರೂ ಸೋದರ ಕಮ್ಯುನಿಸ್ಟ್ ಪಕ್ಷವು ಇನ್ನೊಂದು ಕಮ್ಯುನಿಸ್ಟ್ ಪಕ್ಷಕ್ಕಿಂತ ಭಿನ್ನವಾದ ರಾಜಕೀಯ, ಸೈದ್ಧಾಂತಿಕ ಮತ್ತು ತಾತ್ವಿಕ ನಿಲುವನ್ನು ಪಡೆಯುವ ಹಕ್ಕಿನ ಬಗ್ಗೆ ಸಿ.ಪಿ.ಐ.(ಎಂ) ವಿರೋಧಿಸುವುದಿಲ್ಲ ಎಂಬುದನ್ನು ನಮ್ಮ ಹಿಂದಿನ ಲೇಖನದಲ್ಲಿ ಸ್ಪಷ್ಟಪಡಿಸಿದ್ದೆವು. ಆದರೆ ಆ ಹಕ್ಕನ್ನು ಎಲ್ಲಿ, ಹೇಗೆ, ಯಾವಾಗ ಉಪಯೋಗಿಸಬೇಕು ಅಥವಾ ಆ ಹಕ್ಕನ್ನು ಚಲಾಯಿಸಬೇಕೇ ಬೇಡವೇ ಎಂಬ ಪ್ರಶ್ನೆ ಬೇರೆ ವಿಚಾರ. ಒಂದು ಪಕ್ಷದ ಅಂಥ ಟೀಕೆಯನ್ನು ಮಧ್ಯ ಪ್ರವೇಶವೆಂದು ತಿಳಿಯಬಾರದು ಮತ್ತು ಅಸಮಾನತೆ, ವೈಯಕ್ತಿಕ ಕಮ್ಯುನಿಸ್ಟ್ ಪಕ್ಷವು ತನ್ನ ನೀತಿಗಳನ್ನು ಪಾಲಿಸುವ ಸ್ವಾತಂತ್ರ್ಯ ಇವುಗಳಿಗೆ ನಿರ್ಬಂಧ ಎಂದು ಅದನ್ನು ತಪ್ಪು ತಿಳಿಯಬಾರದು.

ರಾಜೇಶ್ವರರಾಯರು ತಮ್ಮ ಲೇಖನದಲ್ಲಿ, ಭಾರತೀಯ ಕಮ್ಯುನಿಸ್ಟ್ ಚಳುವಳಿಯಲ್ಲಿ ಒಂದು ಪಕ್ಷವು ತಲೆ ಹಾಕುತ್ತಿದೆ ಎಂದು ಮತ್ತು ಇನ್ನೊಂದು ಪಕ್ಷವು ಸಂಪೂರ್ಣವಾಗಿ ಸುಮ್ಮನಿದೆ ಎಂದು ಬರೆದಿದ್ದಾರೆ. ಆದರೆ ನಮ್ಮ ಅನುಭವ ಮತ್ತು ಅಭಿಪ್ರಾಯಕ್ಕೂ ಅವರದಕ್ಕೂ ಹೊಂದಾಣಿಕೆಯಾಗುವುದಿಲ್ಲ. ಯಾವ ಪಕ್ಷವು ಇನ್ನಾವ ಮತ್ತು 1963-64ರಲ್ಲಿ ಬೇರೆಬೇರೆ ಹಾದಿ ಹಿಡಿದಿದ್ದನ್ನು ತುಂಬ ಪ್ರಭಾವಕ್ಕೊಳಪಡಿಸಿದ್ದು ಅವೇ.

## ಪ್ರತ್ಯೇಕ ಮಾರ್ಗಗಳು

1964ರ ನವೆಂಬರ್–ಡಿಸೆಂಬರ್ ತಿಂಗಳಲ್ಲಿ ಅಂಗೀಕರಿಸಲಾದ ಎರಡು ಪಕ್ಷಗಳ ಕಾರ್ಯಕ್ರಮಗಳೂ, ಭಾರತೀಯ ಪ್ರಭುತ್ವದ ಎರಡು ಭಿನ್ನ ತಿಳುವಳಿಕೆಗಳನ್ನು ಒಳಗೊಂಡಿದ್ದು, ಎರಡು ಪ್ರತ್ಯೇಕ ರಾಜಕೀಯ–ತಾಂತ್ರಿಕ ನೀತಿಗಳನ್ನು ರೂಪಿಸಿವೆ. 1967–69ರಲ್ಲಿ ಕಾಂಗ್ರೆಸ್ಸಿನ ಏಕಸ್ವಾಮ್ಯ ಆಳ್ವಿಕೆಯ ವಿರುದ್ಧ ಹೋರಾಡಲು ರೂಪಿಸಿಕೊಳ್ಳಲಾದ ಐಕ್ಯ ವಾಮ ಸಂಘಟನೆಯಿಂದ ಸಿ.ಪಿ.ಐ. ದೂರ ಹೋದಾಗ ಇದಲ್ಲದೆ ಆಳುವ ಕಾಂಗ್ರೆಸ್ ಪಕ್ಷದ ಜೊತೆ ಸೇರಿಕೊಂಡು ಸಿ. ಪಿ. ಐ. (ಎಂ) ವಿರುದ್ಧ ಪ್ರಚಾರ ಗುರುಮಾಡಿದಾಗ, 1969 ಮತ್ತು 1979ರ ನಡುವೆ ಅದರ ತಿಳುವಳಿಕೆಯು ಸ್ಪಷ್ಟವಾಗಿ, ಒರಟಾಗಿ ವ್ಯಕ್ತವಾಯಿತು. ಕೇರಳದಲ್ಲಿ ಸಿ. ಪಿ. ಐ. (ಎಂ) ವಿರುದ್ಧ ಐಕ್ಯರಂಗ ರಚಿತವಾದಾಗ ಮತ್ತು "ರಂಗ ಸರ್ಕಾರ"ವು ಸಿ. ಪಿ. ಐ. ಪ್ರತಿನಿಧಿಗಳ ನೇತೃತ್ವದಲ್ಲಿ ಹತ್ತುವರ್ಷ ನಡೆದಾಗ ಇದು ಇನ್ನಷ್ಟು ಸ್ಪಷ್ಟವಾಗಿ, ನಗ್ನವಾಗಿ ಕಾಣಿಸಿಕೊಂಡಿತು.

## ಎಲ್ಲಿಗೆ ಕರೆದೊಯ್ಯಿತು

ಭಾರತೀಯ ಪ್ರಭುತ್ವ ಮತ್ತು ಆಳುವ ಕಾಂಗ್ರೆಸ್ ಬಗ್ಗೆ ಸಿ.ಪಿ.ಐ. ಕೊಟ್ಟ ಒಂದು ವಿಶ್ಲೇಷಣೆಯು, ಅದನ್ನು ಆಳುವ ಕಾಂಗ್ರೆಸ್ ಜೊತೆ ಸೇರಿಕೊಂಡು ಸಿ.ಪಿ.ಐ.(ಎಂ) ವಿರುದ್ಧ ಒಂದು ರಂಗವನ್ನು ರೂಪಿಸುವಂತೆ ಮಾಡಿತು. ಇದೇ ವಿಶ್ಲೇಷಣೆಯೇ ಶ್ರೀಮತಿ ಗಾಂಧಿಯ ತುರ್ತುಪರಿಸ್ಥಿತಿಯನ್ನು ಬೆಂಬಲಿಸುವಂತೆ ಮಾಡಿತು. ಇದೇ ವಿಶ್ಲೇಷಣೆಯೇ ಸಿ.ಪಿ.ಐ.ಯು 1979ರ ಮಧ್ಯದವರೆಗೆ ಕೇರಳದಲ್ಲಿ ಅದೇ ಐಕ್ಯರಂಗ ಮತ್ತು ಐಕ್ಯರಂಗ

**ಎಂ. ಬಸವಪುನ್ನಯ್ಯ**

ಸರ್ಕಾರಕ್ಕೆ ಕಚ್ಚಿಕೊಂಡಿರುವಂತೆ ಮಾಡಿತು. 1978ರ ಏಪ್ರಿಲ್‌ನಲ್ಲಿ, ತುರ್ತುಪರಿಸ್ಥಿತಿಯನ್ನು ಬೆಂಬಲಿಸಿದ್ದು ತೀವ್ರತಪ್ಪು ಎಂದು ಹೇಳಿಕೊಂಡಿದ್ದರೂ ಅದು ಮುಂದುವರಿದಿತ್ತು.

ರಾಜೇಶ್ವರರಾಯರು ಎರಡು ಪಕ್ಷಗಳ ನಡುವಿನ ವ್ಯತ್ಯಾಸ "ತೆಳುವಾದದ್ದು" ಎಂಬುದನ್ನು ನಾವೇಕೆ ಇಷ್ಟು ವಿರೋಧಿಸುತ್ತಿದ್ದೇವೆ? ಏಕೆಂದರೆ, ತೀವ್ರ ರಾಜಕೀಯ ಸೈದ್ಧಾಂತಿಕ ತಪ್ಪನ್ನು ಕೇವಲ ಆಕಸ್ಮಿಕ ಎಂದು ಕರೆ

ಬೂರ್ಜ್ವಾವರ್ಗ ಮತ್ತು ಭೂಮಾಲೀಕರ ಪ್ರಭುತ್ವ ಇದು ಎಂಬ ಸಿ.ಪಿ.ಐ. (ಎಂ)ನ ದೃಷ್ಟಿಕೋನವನ್ನು ಕಾರ್ಯಕ್ರಮ ತಿರಸ್ಕರಿಸುತ್ತದೆ. ಭೂಮಾಲೀಕರು ರಾಜ್ಯಪ್ರಭುತ್ವದಲ್ಲಿ ಪೂರ್ಣ ಸಹಭಾಗಿಗಳಾಗಿದ್ದರೆ ಮತ್ತು ದೊಡ್ಡ ಬೂರ್ಜ್ವಾವರ್ಗ ನಾಯಕ ಪಾತ್ರ ವಹಿಸುತ್ತಿದ್ದಿದ್ದರೆ ಇದು ಒಂದು ಬಲ ಪ್ರತಿಗಾಮಿ ಪ್ರಭುತ್ವವಾಗಿರುತ್ತಿತ್ತು. ಮತ್ತು ದೇಶವು ಊಳಿಗಮಾನ್ಯ ಮತ್ತು ಅರೆ ಊಳಿಗಮಾನ್ಯ ಹಿತಾಸಕ್ತಿಗಳನ್ನು ಕಾಪಾಡುವ ನೀತಿಯನ್ನು ಅನುಸರಿಸುತ್ತಿತ್ತು. ಕೃಷಿಯಲ್ಲಿ ಬಂಡವಾಳಶಾಹಿಯನ್ನು ಬಲಪಡಿಸಿ ಅವುಗಳನ್ನು ಹತ್ತಿಕ್ಕುತ್ತಿರಲಿಲ್ಲ. ದೊಡ್ಡ ಬೂರ್ಜ್ವಾವರ್ಗವೇ ನಾಯಕನಾಗಿದ್ದಿದ್ದರೆ, ಅದು ಪೂರ್ಣವಾಗಿ ಭಿನ್ನವಾದ ನೀತಿಗಳನ್ನು ಅನುಸರಿಸುತ್ತಿತ್ತು. ಆಗ ಬ್ಯಾಂಕುಗಳ, ಕಲ್ಲಿದ್ದಲ ರಾಷ್ಟ್ರೀಕರಣ ಆಗುತ್ತಿರಲಿಲ್ಲ ಮತ್ತು ಸಾರ್ವಜನಿಕ ವಲಯವೂ ಆಗುತ್ತಿರಲಿಲ್ಲ. ಭಾರತವು ಅಮೆರಿಕದ ಹತ್ತಿರದ ಸಹವರ್ತಿಯಾಗಿರುತ್ತಿತ್ತೇ ವಿನಹ ಅಲಿಪ್ತ ದೇಶವಾಗುತ್ತಿರಲಿಲ್ಲ".

ಭಾರತದ ಪ್ರಭುತ್ವ ಮತ್ತು ಸರ್ಕಾರದ ವರ್ಗಸ್ವರೂಪವನ್ನು ಈ ಪಕ್ಷ ಹೇಗೆ ವಿಶ್ಲೇಷಿಸಿದೆ ಎಂಬುದನ್ನು ತಿಳಿಸುವುದಕ್ಕೋಸ್ಕರ ಇದನ್ನು ಉಲ್ಲೇಖಿಸುತ್ತಿದ್ದೇವೆ.

## ಐಕ್ಯವಾಗಿದ್ದ ಪಕ್ಷದ ವಿಶ್ಲೇಷಣೆ

ಏಪ್ರಿಲ್ 1956ಕ್ಕೆ ಮುಂಚಿನ ಎಲ್ಲ ಪಕ್ಷದ ದಾಖಲೆಗಳಲ್ಲಿ ಭಾರತೀಯ ಪ್ರಭುತ್ವದ ವರ್ಗಸ್ವರೂಪವನ್ನು, ದೊಡ್ಡ ಬೂರ್ಜ್ವಾವರ್ಗದ ನೇತೃತ್ವದಲ್ಲಿರುವ ಬೂರ್ಜ್ವಾ ಭೂಮಾಲೀಕ ವರ್ಗಗಳ ಪ್ರಭುತ್ವ ಎಂದು ವಿವರಿಸಲಾಗಿತ್ತು. ಪಕ್ಷದ ನಾಲ್ಕನೇ ಅಧಿವೇಶನಕ್ಕೆ ಮುಂಚಿನ ರಾಜಕೀಯ ಗೊತ್ತುವಳಿಯಲ್ಲೂ ಹಾಗೇ ಇತ್ತು. ದಿವಂಗತ ಅಜಯ್‌ಕುಮಾರ್ ಘೋಷ್ ಅವರು (ಐಕ್ಯ ಸಿ.ಪಿ.ಐ. ಪ್ರಧಾನ ಕಾರ್ಯದರ್ಶಿ) ಪ. ಬಂಗಾಳ ರಾಜ್ಯಸಮಿತಿಗೆ ಮಾಡಿದ ಭಾಷಣದಲ್ಲಿ ಇದನ್ನು ಹೀಗೇ ವಿವರಿಸಿದ್ದರು. ಆದರೆ 1964ರಲ್ಲಿ ಈಗಿನ ಸಿ. ಪಿ. ಐ. ಅಂಗೀಕರಿಸಿದ ಪಕ್ಷದ ಕಾರ್ಯಕ್ರಮದಲ್ಲಿ ಇದನ್ನು ಪೂರ್ಣವಾಗಿ ತಿರಸ್ಕರಿಸಲಾಯಿತು. ಹೊಸವರ್ಗಸ್ವರೂಪ ವಿಶ್ಲೇಷಣೆಯನ್ನು ಸೇರಿಸಲಾಯಿತು. ಇದು ಮುಂದೆ ಕೇರಳದಲ್ಲಿ ಮಾರ್ಕ್ಸ್‌ವಾದಿ ವಿರೋಧಿ ರಂಗ ರಚಿಸುವುದಕ್ಕೆ, ತುರ್ತುಪರಿಸ್ಥಿತಿ ಬೆಂಬಲಿಸುವುದಕ್ಕೆ ದಾರಿ ಮಾಡಿತು.

## ದೊಡ್ಡ ಅನ್ಯಾಯ

ವಿಶ್ಲೇಷಣೆಯನ್ನು ಹೀಗೇ ಉಳಿಸಿಕೊಂಡು, ತುರ್ತುಪರಿಸ್ಥಿತಿ ಬೆಂಬಲಿ

# "ಸೂಕ್ಷ್ಮ ವ್ಯತ್ಯಾಸ"ವಲ್ಲ ಅಪಾರ ವ್ಯತ್ಯಾಸ

ಪಕ್ಷದ ಆಂತರಿಕ ವಿಚಾರಗಳಲ್ಲಿ ತಲೆ ಹಾಕಿತು ಎಂದು ಚರ್ಚೆಯಲ್ಲಿ ಕೂಡುವುದು, ವಿಶ್ವದ ಬೆಳವಣಿಗೆಗಳ ಈ ಘಟ್ಟದಲ್ಲಿ ಅಪೇಕ್ಷಾರ್ಹವಾದುದೇನೂ ಅಲ್ಲ. ಈ ವಿಚಾರದಲ್ಲಿ ರಾಜೇಶ್ವರ ರಾವ್ ಮತ್ತು ಅವರ ಪಕ್ಷ ನಮ್ಮೊಂದಿಗೆ ಸಹಕರಿಸುವರೆಂದು ಆಶಿಸುತ್ತೇವೆ.

## ವಿಭಿನ್ನ ಅಭಿಪ್ರಾಯಗಳು

ಪ್ರಸ್ತುತ ಭಾರತೀಯ ಪ್ರಭುತ್ವ ಮತ್ತು ಸರ್ಕಾರದ ವರ್ಗಸ್ವರೂಪದ ಬಗ್ಗೆ ಎರಡು ವಿಭಿನ್ನ ಅಭಿಪ್ರಾಯಗಳಿರುವ ಪ್ರಶ್ನೆಯ ಬಗ್ಗೆ ರಾಜೇಶ್ವರ ರಾವ್ ಬರೆಯುತ್ತಾರೆ : "ಎರಡೂ ಸ್ವರೂಪವರ್ಣನೆಗಳಲ್ಲಿ ಸೂಕ್ಷ್ಮವ್ಯತ್ಯಾಸವಿದೆ. ಆದರೆ ಎರಡೂ ಕಾರ್ಯಕ್ರಮಗಳಲ್ಲಿ ರಾಜ್ಯದ ವರ್ಗಸ್ವರೂಪದಲ್ಲಿ ಅದೇ ವರ್ಗಗಳು ಇವೆ" ಎಂದು. ಸಿ. ಪಿ. ಐ. (ಎಂ)ಮತ್ತು ಸಿ. ಪಿ. ಐ. ಗಳ ವರ್ಗನಿರ್ಣಯಗಳ ನಡುವೆ ಒತ್ತು ಮತ್ತು ತೀರ್ಪುಗಳಲ್ಲಿ ಮಾತ್ರ ವ್ಯತ್ಯಾಸವಿದೆಯೆಂದು ಅವರು ಹೇಳುತ್ತಾರೆ. ಆದರೆ, ಭಾರತೀಯ ಪ್ರಭುತ್ವ ಮತ್ತು ಅದರ ವರ್ಗಸ್ವರೂಪದ ಬಗ್ಗೆ ಎರಡು ಪಕ್ಷಗಳಿಗೂ ಇರುವ ಭಿನ್ನಾಭಿಪ್ರಾಯಗಳು ವಿಶಾಲವಾದುವು ಮತ್ತು ಮೂಲಭೂತವಾದುವು ಎಂಬುದನ್ನು ಮತ್ತೆ ಹೇಳುತ್ತೇವೆ. ಒಮ್ಮೆ ಐಕ್ಯವಾಗಿದ್ದ ಸಿ. ಪಿ. ಐ. ನ ಬೆಳವಣಿಗೆಗಳನ್ನು

ಈ "ರಂಗ"ವು ಸಿ. ಪಿ. ಐ.ನ ಮಾದರಿ ತಂತ್ರ ಎಂದು ಪ್ರದರ್ಶಿಸಿ, ಜಗತ್ತಿನಾದ್ಯಂತ ಇದನ್ನು ಜಾಹೀರು ಮಾಡಲಾಯಿತು. "ಕಮ್ಯುನಿಸ್ಟರು, ಮುಸ್ಲಿಮ್‌ಲೀಗ್, ರೆವೆಲ್ಯೂಷನರಿ ಸೋಷಲಿಸ್ಟ್ ಪಾರ್ಟಿ, ಪ್ರಜಾ ಸೋಷಲಿಸ್ಟ್ ಪಾರ್ಟಿ ಇಂಥ ವಾಮಪಂಥೀಯ ಶಕ್ತಿಗಳಿಂದ ಕೂಡಿದ ಐಕ್ಯರಂಗ" ಎಂದು ಇದನ್ನು ಅನೇಕ ಲೇಖನಗಳು ಕರಪತ್ರಗಳು ಮತ್ತು ಪುಸ್ತಿಕೆಗಳಲ್ಲಿ ಪ್ರಶಂಸಿಸಲಾಯಿತು. 1971ರ ಸೆಪ್ಟೆಂಬರ್‌ನಲ್ಲಿ ಕೇರಳದ ರಾಜ್ಯಸರ್ಕಾರದಲ್ಲಿ ಆಳುವ ಕಾಂಗ್ರೆಸ್ ಅನ್ನೂ ಸಹಭಾಗಿಯನ್ನಾಗಿ ಮಾಡಿಕೊಳ್ಳಲು ಈ "ವಾಮಪಂಥೀಯ ಶಕ್ತಿಗಳ ಐಕ್ಯರಂಗವನ್ನು" ಇನ್ನೂ ವಿಶಾಲಗೊಳಿಸಲಾಯಿತು. ಕೇರಳದ ರಾಜಕೀಯವನ್ನು ಚೆನ್ನಾಗಿಬಲ್ಲ ಎಲ್ಲರಿಗೂ, ಈ ಸಿ. ಪಿ. ಐ. ನೇತೃತ್ವದ ಕೇರಳ ಐಕ್ಯ ರಂಗ ಸರ್ಕಾರವನ್ನು ಬಿಟ್ಟು ಆ ರಾಜ್ಯದಲ್ಲಿ ಬೇರೆ ಹೆಸರಿಸುವ "ಬಲಪಂಥೀಯ ಶಕ್ತಿ" ಇಲ್ಲ ಎಂಬ ಅಸಹ್ಯ ಸತ್ಯವನ್ನು ಗಮನಿಸದೆ ಇರುವುದಿಲ್ಲ. ತಮ್ಮದು ಉಗ್ರ ಬಲಪ್ರತಿಗಾಮಿ ಶಕ್ತಿಗಳ ವಿರುದ್ಧವಾದ ರಂಗ ಎಂದು ಸಿ.ಪಿ.ಐ. ತಮ್ಮಟೆ ಹೊಡೆದು ಹೇಳಿಕೊಂಡರೂ ಇದು ತಿಳಿಯುತ್ತಿತ್ತು.

ಯುವುದರಿಂದ ಯಾವ ಪಕ್ಷಕ್ಕೂ ಲಾಭವಾಗುವುದಿಲ್ಲ. ಎಡ ಐಕ್ಯತೆಗೂ ಸಹಾಯವಾಗುವುದಿಲ್ಲ.

ಈಗ ಚರ್ಚಿಸುತ್ತಿರುವ ವಿಷಯವು ಭಾರತದಲ್ಲಿ ನಮ್ಮ ಚಟುವಟಿಕೆಗಳ ಮೇಲೆ ತಕ್ಷಣದ ಮತ್ತು ನೇರವಾದ ಪ್ರಭಾವವನ್ನು ಬೀರುವುದರಿಂದ, ಆಳುವ ಕಾಂಗ್ರೆಸ್(ಐ) ಮತ್ತು ಭಾರತೀಯ ಪ್ರಭುತ್ವ ಮತ್ತು ಸರ್ಕಾರದ ಸರಿಯಾದ ವಿಶ್ಲೇಷಣೆಯು ವಿಸ್ತಾರವಾದ ಚರ್ಚೆಯ ಮುಖ್ಯಪ್ರಶ್ನೆಯಾಗುತ್ತದೆ. ಇಂಥ ಮುಖ್ಯ ಪ್ರಶ್ನೆಯ ಬಗ್ಗೆ ರಾಜೇಶ್ವರರಾವ್ ಅಸ್ಪಷ್ಟವಾಗಲು ಪ್ರಯತ್ನಿಸುತ್ತಿದ್ದಾರೆ. ಸಿ. ಪಿ. ಐ.ನ ಇತ್ತೀಚಿನ ನಿಲುವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು, ನಾವು ಅದು ಡಿಸೆಂಬರ್ 74ರ ನಿಲುವಿನಿಂದ ಭಿನ್ನವಾಗಿದೆಯೋ ಅಥವಾ ಅದಕ್ಕೇ ಅಂಟಿಕೊಂಡಿದೆಯೋ ಎಂಬುದರ ಬಗ್ಗೆ ಸ್ಪಷ್ಟನೆ ಕೇಳಬಯಸುತ್ತೇವೆ.

## ಸಿ.ಪಿ.ಐ.ನ ಪೂರ್ಣ ತಿಳುವಳಿಕೆ

ಸಿ.ಪಿ.ಐ.ನ "ಕೇಂದ್ರ ಪಕ್ಷ ಶಿಕ್ಷಣ ಇಲಾಖೆ"ಯು ಹಿಂದೆ ಹೊರತಂದ ಪುಸ್ತಿಕೆಯೊಂದರಲ್ಲಿ ಹೀಗೆ ಸ್ಪಷ್ಟವಾಗಿ ಹೇಳಲಾಗಿತ್ತು: "ದೊಡ್ಡ ಬೂರ್ಜ್ವಾ ವರ್ಗದಿಂದ ಆಳಲ್ಪಡುತ್ತಿರುವ,

ಸಿ.ಪಿ.ಐ.(ಎಂ) ಇದನ್ನು ಪೂರ್ಣವಾಗಿ ವಿರೋಧಿಸುತ್ತದೆ ಅಂದ ಮೇಲೆ ಈ ತೀವ್ರ ಭಿನ್ನಾಭಿಪ್ರಾಯವನ್ನು ರಾಜೇಶ್ವರರಾವ್ "ಸೂಕ್ಷ್ಮ ವ್ಯತ್ಯಾಸ" ಎಂದು ಹೇಳುವುದೇಕೆ?

## ಅಸ್ಪಷ್ಟ ಉತ್ತರಗಳು

ಅಲಿಪ್ತ ನೀತಿಯ ಜಾರಿ, ಸಾರ್ವಜನಿಕ ವಲಯದ ಸೃಷ್ಟಿ, ಕಾಂಗ್ರೆಸ್ ಕೃಷಿ ಸುಧಾರಣೆಗಳ ಜಾರಿ ಮತ್ತು ಊಳಿಗಮಾನ್ಯ ಪಟ್ಟಭದ್ರ ಹಿತಾಸಕ್ತಿಗಳನ್ನು "ಹತ್ತಿಕ್ಕುವುದು" ಇವೆಲ್ಲವೂ ದೊಡ್ಡ ಬೂರ್ಜ್ವಾವರ್ಗವನ್ನು ವಿರೋಧಿಸಿ ರೂಪಿಸಿದ ನೀತಿಗಳೆಂದು ಸಿ.ಪಿ.ಐ. ಅಂಧವಾಗಿ ನಂಬಿದೆ. ಹಾಗಾದರೆ ಈ ನೀತಿಗಳಿಗೆ ನಾಯಕತ್ವ ಕೊಡುತ್ತ ಪ್ರಭುತ್ವ ಅಧಿಕಾರದ ಉನ್ನತಸ್ಥಾನದಲ್ಲಿದ್ದವರು ಯಾರು?

ಈ ಪ್ರಶ್ನೆಗೆ ಸಿ.ಪಿ.ಐ.ನ ಉತ್ತರ ಯಾವಾಗಲೂ ಅಸ್ಪಷ್ಟ ಮತ್ತು ಬೇಕೆಂದೇ ಸುಣುಚಿಕೊಳ್ಳುವಂಥವಾಗಿರುತ್ತವೆ. ಕೆಲವೊಮ್ಮೆ ದೊಡ್ಡ ಮತ್ತು ದೊಡ್ಡದಲ್ಲದ ಬೂರ್ಜ್ವಾವರ್ಗ ಎರಡೂ ಎಂದು ಹೇಳಲಾಗುತ್ತದೆ. ಕೆಲವೊಮ್ಮೆ ದೊಡ್ಡದಲ್ಲದ ಬೂರ್ಜ್ವಾವರ್ಗವು ಎರಡೂ ಸೇರಿ ಇಡೀ ಬೂರ್ಜ್ವಾವರ್ಗ ಎಂದು ಹೇಳಲಾಗುತ್ತದೆ. ಹೀಗೆ ಹಲವು ರೀತಿಯ ಉತ್ತರಗಳಿವೆ.

ಸಿದ್ದನ್ನು ಮಾತ್ರ ದೊಡ್ಡ ತಪ್ಪು ಎಂದು ಸಿ. ಪಿ. ಐ. ಹೇಳುತ್ತಾ ಹೋದರೆ, ಅದು ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ದೊಡ್ಡ ಅನ್ಯಾಯ ಮಾಡಿದಂತಾಗುತ್ತದೆ.

1969 ರಿಂದ 1979ರೊಳಗೆ ಸಿ. ಪಿ.ಐ. ಮಾಡಿದ ತಪ್ಪುಗಳಿಂದ ಹೊರಬರಲು ಅವರ ಮರುಳ ಹೇಳಿಕೆಗಳು ಸಹಾಯ ಮಾಡುವುದಿಲ್ಲ.

ಎರಡು ಪಕ್ಷಗಳ ನಡುವಿನ ಇಂಥ ರಾಜಕೀಯ, ಕಾರ್ಯಕ್ರಮಾತ್ಮಕ ಭಿನ್ನಾಭಿಪ್ರಾಯಗಳನ್ನು ಸಣ್ಣದೆಂದು ಭಾವಿಸಲು ರಾಜೇಶ್ವರರಾವ್ ಪ್ರಯತ್ನಿಸಿದ್ದಾರೆ. ಅಂತರಾಷ್ಟ್ರೀಯ ಕಮ್ಯುನಿಸ್ಟ್ ಪಕ್ಷಗಳೊಂದಿಗಿನ ತಮ್ಮ ಸಂಬಂಧಗಳ ಬಗ್ಗೆ ಉಬ್ಬಿ ಮಾತನಾಡುತ್ತಾರೆ.

ಸಿ.ಪಿ.ಐ.ಗಿರುವಂತೆ ಸಿ. ಪಿ. ಐ. (ಎಂ)ಗೆ ಹಲವಾರು ದೇಶಗಳೊಂದಿಗೆ ಔಪಚಾರಿಕ ಸಂಬಂಧಗಳಿಲ್ಲದಿದ್ದರೂ ಅದು ಮಾರ್ಕ್ಸ್‌ವಾದ, ಲೆನಿನ್‌ವಾದ, ಕಾರ್ಮಿಕ ಅಂತರರಾಷ್ಟ್ರೀಯತೆ ಮತ್ತು ವಿಶ್ವ ಕಮ್ಯುನಿಸಂಗಳ ರಕ್ಷಕನಾಗಿ ಉಳಿದಿದೆ. ಬಹುಸಂಖ್ಯೆಯಲ್ಲಿ ಇತರ ಪಕ್ಷಗಳೊಂದಿಗೆ ಸಂಬಂಧ ಇಟ್ಟುಕೊಂಡ ಮಾತ್ರಕ್ಕೆ ಒಂದು ಪಕ್ಷ ನಿಜವಾದ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಆಗಲಾರದು.

**ಆರ್ಥಿಕ ಸಮೀಕ್ಷೆ:**

ಆರ್. ಚಂದ್ರ

# ಹಣದುಬ್ಬರ ತಡೆಯಲು ಇನ್ನಷ್ಟು ವಿಫಲ ಪ್ರಯತ್ನಗಳು

## ಸೋಲಿನ ಸಾಲು :

'ಹಣದುಬ್ಬರ ತಡೆಯುತ್ತೇವೆ' ಎಂಬ ಆಶ್ವಾಸನೆಕೊಟ್ಟು ಇಂದಿರಾ ಗಾಂಧಿ ಪಕ್ಷವು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದು ಒಂದೂವರೆ ವರ್ಷವಾಯಿತು. ಪ. ಬಂಗಾಳ, ತ್ರಿಪುರಾ, ಕೇರಳ, ಜಮ್ಮು, ಕಾಶ್ಮೀರ ಮತ್ತು ತಮಿಳುನಾಡು ರಾಜ್ಯಗಳನ್ನುಳಿದು ಇತರ ಎಲ್ಲಾ ರಾಜ್ಯಗಳಲ್ಲಿ ಇಂದಿರಾ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಒಂದುವರ್ಷ ಕಳೆಯಿತು. ಬೆಲೆ ನಿಯಂತ್ರಿಸುತ್ತೇವೆ, ಹಣದುಬ್ಬರ ತಡೆಯುತ್ತೇವೆ ಎಂದು ಕೇಂದ್ರ ಅರ್ಥಮಂತ್ರಿ ವೆಂಕಟ್ರಾಮನ್ ತನ್ನ ಕಳೆದ ಎರಡು ವರ್ಷಗಳ ಮುಂಗಡ ಪತ್ರಗಳಲ್ಲಿ ಆಶ್ವಾಸನೆ ಕೊಡುತ್ತಾ ಬಂದರು.

ಕೃಷಿ ಹಾಗೂ ಕೈಗಾರಿಕಾ ಉತ್ಪಾದನೆ ಹೆಚ್ಚಿಸಿ ಹಣದುಬ್ಬರ, ಬೆಲೆ ಏರಿಕೆಗಳನ್ನು ತಡೆಗಟ್ಟಬಹುದೆಂಬ ಉದ್ದೇಶದಿಂದ ಭೂಮಾಲಕರಿಗೂ ಬಂಡವಾಳಶಾಹಿಗಳಿಗೂ ಧಾರಾಳವಾಗಿ ಇನ್ನಷ್ಟು ಸಹಾಯ, ಸೌಕರ್ಯ, ರಿಯಾಯಿತಿಗಳನ್ನು ನೀಡಲಾಯಿತು. ಆದರೆ ನಿರೀಕ್ಷಿಸಿದಷ್ಟು ಉತ್ಪಾದನೆ ಹೆಚ್ಚಾಗಲಿಲ್ಲವೆಂದೂ, ಹೆಚ್ಚಾದ ಉತ್ಪಾದನೆಗನುಗುಣವಾಗಿ ಬೆಲೆಏರಿಕೆ, ಹಣದುಬ್ಬರ ಇಳಿಯಲಿಲ್ಲವೆಂದೂ ಅರ್ಥಮಂತ್ರಿಯವರೇ ಇತ್ತೀಚೆಗೆ ವಿಷಾದಿಸಿದ್ದಾರೆ!

ಸರಕಾರದ ವೆಚ್ಚವನ್ನು ಸರಿದೂಗಿಸಲು ಹೊಸ ಸಂಪನ್ಮೂಲಗಳನ್ನು ಪಡೆಯುವ ಉದ್ದೇಶದಿಂದ ಕಪ್ಪುಹಣವನ್ನು ತೆರಿಗೆ ಇಲ್ಲದೆ, ಕಾನೂನಿನ ಕ್ರಮಗಳಿಲ್ಲದೆ ಬೇರರ್ ಬಾಂಡಿನಲ್ಲಿ ತೊಡಗಿಸಿ ಬಿಳಿಹಣವನ್ನಾಗಿಸಲು ಈ ವರ್ಷದ ಮುಂಗಡಪತ್ರದಲ್ಲಿ ಸೂಚಿಸಲಾಯಿತು. ಈ ಮೂಲದಿಂದ ರೂ. 1000 ಕೋಟಿ ಸಂಗ್ರಹಿಸುವ ಉದ್ದೇಶವಿದ್ದರೂ, ರೂ.375 ಕೋಟಿಯಷ್ಟೇ ಸಂಗ್ರಹವಾಗಿ, ಅರ್ಥಮಂತ್ರಿಯವರು ಮತ್ತೆ ನಿರಾಶರಾಗಬೇಕಾಯಿತು! 1981-82ರಲ್ಲಿ ಕೇಂದ್ರದ ನಿರೀಕ್ಷಿತ ಕೊರತೆಯು ರೂ. 1539 ಕೋಟಿಯಿಂದ ರೂ. 2164 ಕೋಟಿಗೆ ಏರುವಂತಾಗಿದೆ!

ಈ ಮಧ್ಯೆ ಕೃಷಿ ಉತ್ಪಾದನೆಯು ಈ ವರ್ಷ 133ಮಿ. ಟನ್‌ಗಳಷ್ಟಾಗಿದ್ದು, ಕಳೆದ ವರ್ಷಕ್ಕಿಂತ ಉತ್ತಮವಾಗಿದ್ದರೂ ಸಾರ್ವಜನಿಕ ವಿತರಣೆಗಾಗಿ ಸರಕಾರದ ಆಹಾರಧಾನ್ಯ ಸಂಗ್ರಹಣೆಯು ನಿರೀಕ್ಷೆಗಿಂತ ಹಿಂದುಳಿದಿದೆ. ಉತ್ತಮ ಫಸಲಿನ ವರ್ಷದಲ್ಲಿಯೂ ಆಹಾರಧಾನ್ಯಗಳು ಸಾಕಷ್ಟು ಮಾರುಕಟ್ಟೆಗೆ ಬಾರದೆ ಬೆಲೆಗಳು ಏರುತ್ತಲೇ ಇವೆ. ಈ ಪರಿಸ್ಥಿತಿಯ ಪರಿಹಾರಕ್ಕಾಗಿ ಆಹಾರಧಾನ್ಯಗಳನ್ನು ಆಮದು ಮಾಡುವುದಾಗಿ ಇಂದಿರಾ ಗಾಂಧಿಯ ಘನ ಸರಕಾರ ನಿರ್ಧರಿಸಿದ್ದು, ತನ್ನ ಆರ್ಥಿಕ ದುರಾಡಳಿತವನ್ನು ಜಗಜ್ಜಾಹೀರುಗೊಳಿಸಿದೆ!

ಸರಕಾರದ ಇದುತನಕದ ಯಾವ ಕ್ರಮಗಳಿಗೂ ಮಣಿಯದೆ, ಹಣದುಬ್ಬರದ ಜ್ವರ ಏರುತ್ತಲೇ ಇದೆ. ಸಗಟು ವ್ಯಾಪಾರದ ಬೆಲೆ ಸೂಚಿಯು (1970-71 = 100) 5-4-80 ರಂದು 233.5ರಷ್ಟಾಗಿದ್ದು, 4-4-81 ರಲ್ಲಿ 271.8 ಕ್ಕೇರಿ, 13-6-81ರಲ್ಲಿ 277.8ರ ಗರಿಷ್ಠ ಮಟ್ಟಕ್ಕೆ ತಲುಪಿದೆ. ಚಿಲ್ಲರೆ ವ್ಯಾಪಾರದ ಬೆಲೆಸೂಚಿಯು ಇನ್ನಷ್ಟು ವೇಗವಾಗಿ ಏರುತ್ತಿದೆ. ಕೈಗಾರಿಕಾ ಕಾರ್ಮಿಕರ ಗ್ರಾಹಕರ ಬೆಲೆಸೂಚಿಯು (1960 = 100) ಡಿಸೆಂಬರ್ 1979ರಲ್ಲಿ 364ಇದ್ದುದು, ಏಪ್ರಿಲ್ 1980ರಲ್ಲಿ 375ಕ್ಕೇರಿ, ಫೆಬ್ರವರಿ 1981ರಲ್ಲಿ 418ಕ್ಕೆ ತಲುಪಿದೆ, ಜೂನ್ 1981ರಲ್ಲಿ 426ಕ್ಕೂ ಮೀರಿದೆ. ರೂಪಾಯಿಯ ಬೆಲೆ 18 ಪೈಸೆಗಿಳಿದಿದೆ! ಪರಿಣಾಮವಾಗಿ, ಇಂದಿರಾಗಾಂಧಿಯ ಆಳ್ವಿಕೆಯ ಮೊದಲ ವರ್ಷದಲ್ಲಿ ಕೇಂದ್ರ ಸರಕಾರದ ನೌಕರರಿಗೆ 5ಕಂತು ತುಟ್ಟಿಭತ್ತೆ ನೀಡಬೇಕಾಯಿತು, ಅವರ ಆಳ್ವಿಕೆಯ ಎರಡನೇ ವರ್ಷದ ಮೊದಲ ಅರ್ಧದಲ್ಲಿಯೇ 3 ಕಂತು ತುಟ್ಟಿಭತ್ತೆ ಕೊಡಬೇಕಾಗಿ ಬಂದಿದೆ. ಈಗ ಸರಕಾರಕ್ಕೆ ತಲೆನೋವು ಹೆಚ್ಚಾಗಿದೆ!

## ಇನ್ನಷ್ಟು ಕಠಿಣ ಕ್ರಮಗಳು

ಹಣದುಬ್ಬರ ತಡೆಯಲು ಇನ್ನಷ್ಟು ಕಠಿಣ ಕ್ರಮಗಳನ್ನು ಕೈಕೊಳ್ಳುವುದಾಗಿ ಅರ್ಥಮಂತ್ರಿಯವರು ಇತ್ತೀಚೆಗೆ ಬೆದರಿಸುತ್ತಲೇ ಇದ್ದರು. ಲೋಕಸಭೆಯ ಮತ್ತು ವಿಧಾನಸಭೆಗಳ ಕೆಲವು ಸ್ಥಾನಗಳಿಗೆ ಉಪಚುನಾವಣೆ ಮುಗಿದ ಕೂಡಲೇ, ಜುಲೈ 13ರಂದು ಹಣದುಬ್ಬರ ತಡೆಯಲು ಹೊಸ ಕಠಿಣ ಕ್ರಮಗಳನ್ನು ಪ್ರಕಟಿಸಲಾಯಿತು. ಈ ಪ್ರಕಟನೆಯಂತೆ :

1. ಮೇಲ್ತರಗತಿಯ ಆದಾಯ ತೆರಿಗೆದಾರರು ಹೆಚ್ಚಿನ ದರಗಳಲ್ಲಿ ಕಡ್ಡಾಯ ಠೇವಣಿ ಇಡುವುದು.

2. ಬ್ಯಾಂಕು ಮತ್ತಿತರ ಸಂಸ್ಥೆಗಳಲ್ಲಿರಿಸಿದ ದೀರ್ಘಾವಧಿ ಠೇವಣಿಯನ್ನು ಅವಧಿ ಮುಗಿದ ಮೇಲೆ ಬಡ್ಡಿಸಹಿತ ಠೇವಣಿದಾರರ ಖಾತೆಗೇ ಸೇರುವಂತೆ ಚೆಕ್ ಮೂಲಕ ಮರುಪಾವತಿ ಮಾಡುವುದು.

3. ವಾಣಿಜ್ಯ ಬ್ಯಾಂಕುಗಳ ಸಾಲಗಳ ಮೇಲೆ ಬಡ್ಡಿ ಹೆಚ್ಚಿಸುವುದು ಮತ್ತು ಸಾಲ ನೀಡಿಕೆಯ ಮೇಲೆ ಮಿತಿ ಹೇರುವುದು.

4. ಸಾರ್ವಜನಿಕ ವಿತರಣೆಗಾಗಿ ತಾವು ದಾಸ್ತಾನು ಮಾಡಲು ಆಹಾರ ಧಾನ್ಯಗಳನ್ನು, ಸಕ್ಕರೆ, ಅಡಿಗೆ ತೈಲಗಳನ್ನು ಆಮದು ಮಾಡುವುದು.

5. ಪೆಟ್ರೋಲಿಯಂ ಪದಾರ್ಥಗಳ ಬಳಕೆಯನ್ನು ಮಿತಿಗೊಳಿಸಲು ಅವುಗಳ ಬೆಲೆ ಏರಿಸುವುದು.

## ತುರ್ತುಪರಿಸ್ಥಿತಿಯ ಪುನರಾವರ್ತನೆ

ಮೇಲಿನ ಕ್ರಮಗಳು ಪರಿಣಾಮಕಾರಿಯಾಗದಿದ್ದಲ್ಲಿ ಕಂಪೆನಿಗಳ ಶೇರುದಾರರಿಗೆ ಕೊಡುವ ಡಿವಿಡೆಂಡ್ ತಡೆಹಿಡಿಯುವುದು; ಕಾರ್ಮಿಕರ, ನೌಕರರ ವೇತನ ಸ್ತಂಭನಗೊಳಿಸುವುದು ಮತ್ತು ಅವರ ತುಟ್ಟಿಭತ್ತೆ ಹೆಚ್ಚಳವನ್ನು ಕಡ್ಡಾಯ ಠೇವಣಿಯಲ್ಲಿಡಿಸುವುದು; ಸಂಘಟಿತ ಕಾರ್ಮಿಕರು ಚಳವಳಿ ಮುಷ್ಕರ ಮಾರ್ಗಗಳನ್ನು ಅನುಸರಿಸದಂತೆ ಕಾರ್ಮಿಕ ಕಾಯಿದೆಗಳನ್ನು ಬಿಗಿಗೊಳಿಸುವುದು; ರಾಷ್ಟ್ರೀಯ ರಕ್ಷಣಾ ಕಾನೂನನ್ನು ಕಾರ್ಮಿಕ ಹಾಗೂ ರಾಜಕೀಯ ಮುಖಂಡರ ಮೇಲೆ ಜಾರಿಗೊಳಿಸಿ ಅವರನ್ನು ವಿಚಾರಣೆ ಇಲ್ಲದೆ ಸೆರೆಮನೆಯಲ್ಲಿಡುವುದು ಇತ್ಯಾದಿ ಕ್ರಮಕ್ಕೆಗೊಳ್ಳುವ ಸಂಭವವೂ ಇದೆ! ಅರ್ಥಾತ್, ಕಾರ್ಮಿಕ ಹೋರಾಟವನ್ನು ಹತ್ತಿಕ್ಕುವುದು, ಪ್ರಜಾಪ್ರಭುತ್ವವನ್ನು ಮೊಟಕುಗೊಳಿಸುವುದು, ತುರ್ತುಪರಿಸ್ಥಿತಿಯನ್ನು ಪುನಃ ಜಾರಿಗೆ ತರುವುದು, ಸರ್ವಾಧಿಕಾರವನ್ನು ಸ್ಥಾಪಿಸುವುದು, ಇತ್ಯಾದಿ ಕ್ರಮಗಳೂ ಸರಕಾರದ ಪರಿಶೀಲನೆಯಲ್ಲಿವೆ!

## ವಿಫಲ ಪ್ರಯತ್ನಗಳು

ಈ ಎಲ್ಲಾ ಕ್ರಮಗಳೂ 'ಹಳೇ ಮಧ್ಯವನ್ನು ಹೊಸ ಬಾಟ್ಲಿಯಲ್ಲಿ ಹಾಕಿಕೊಟ್ಟಂತೆ'. ಇದುವರೆಗಿನ ಅನುಭವದಂತೆ ಇವುಗಳು ಹಣದುಬ್ಬರ, ಬೆಲೆಏರಿಕೆ ಸಮಸ್ಯೆಗಳನ್ನು ಪರಿಹರಿಸುವ ಬದಲು ಇನ್ನಷ್ಟು ಉಲ್ಬಣಗೊಳಿಸುವುವು ಹೇಗೆ? ಒಂದೊಂದಾಗಿ ಪರಿಶೀಲಿಸೋಣ?

## ಕಡ್ಡಾಯ ಠೇವಣಿ

ಮೊನ್ನೆಯ ಹೊಸ ಆಧ್ಯಾದೇಶದಂತೆ, ರೂ. 50000ಕ್ಕೂ ಹೆಚ್ಚು ಆದಾಯವಿರುವವರು ತಮ್ಮ ಆದಾಯದ ಶೇಕಡಾ 12½ಯ ದರದ ಬದಲು ಶೇಕಡಾ 15ರ ದರದಲ್ಲೂ, ರೂ. 70000ಕ್ಕೂ ಹೆಚ್ಚು ಆದಾಯ ಏರುವವರು ಶೇಕಡಾ 15ರ ದರದ ಬದಲು ಶೇ. 18ರ ದರದಲ್ಲಿಯೂ ಕಡ್ಡಾಯಠೇವಣಿ ಇಡಬೇಕಾಗುವುದು. ಮೇಲ್ತರಗತಿಯ ಆದಾಯ ತೆರಿಗೆದಾರರ ಸಂಖ್ಯೆ ಬಹಳ ಕಡಿಮೆ ಇರುವುದರಿಂದ, ಅವರು ಹೆಚ್ಚಿನ ದರಗಳಲ್ಲಿ ಕಡ್ಡಾಯ ಠೇವಣಿ ಇಡುವುದರಿಂದ ಸರಕಾರದ ವೆಚ್ಚವನ್ನು ಸರಿದೂಗಿಸಲು ಸ್ವಲ್ಪ ಹಣ ಸಂಗ್ರಹಿಸಬಹುದೇ ವಿನಹ, ದೇಶದ ಒಟ್ಟು ಹಣ ಸರಕಾರದ ಮೇಲಾಗಲೀ ಹಣದುಬ್ಬರದ ಮೇಲಾಗಲೀ ಹೆಚ್ಚಿನ ಪರಿಣಾಮವಾಗಲಾರದು. ಈ ಕ್ರಮವು ಸದ್ಯದಲ್ಲಿಯೇ ಕಡ್ಡಾಯಠೇವಣಿ ದರ ಹೆಚ್ಚಳವನ್ನು ಎಲ್ಲಾ ಆದಾಯ ತೆರಿಗೆದಾರರಿಗೂ ವಿಸ್ತರಿಸಲು, ಶೇರುದಾರರಿಗೆ ಡಿವಿಡೆಂಡ್ ಪಾವತಿ ತಡೆಹಿಡಿಯಲು ಕಾರ್ಮಿಕರ ಮತ್ತು ನೌಕರರ ವೇತನ ಹಾಗೂ ತುಟ್ಟಿಭತ್ತೆ ಹೆಚ್ಚಳವನ್ನು ಕಡ್ಡಾಯಠೇವಣಿಗೊಳಿಸಲು ನಾಂದಿಯಾದೀತು ಅಷ್ಟೆ.

ಕಡ್ಡಾಯಠೇವಣಿಯಿಂದ ಹಣದುಬ್ಬರ ತಡೆಯಲು ಅಸಾಧ್ಯವೆಂದು 1963ರಲ್ಲಿಯೂ, 1974-77ರಲ್ಲಿಯೂ ಅನುಭವವಾಗಿದೆ. ಬೆಲೆ ಏರಿಕೆಯ ಪರಿಸ್ಥಿತಿಯಲ್ಲಿ ಕಡ್ಡಾಯಠೇವಣಿಯಿಂದ, ಮುಖ್ಯವಾಗಿ ಕಾರ್ಮಿಕ ಹಾಗೂ ನೌಕರ ವರ್ಗದ ಗ್ರಾಹಕ ಶಕ್ತಿ ಇನ್ನಷ್ಟು ಕಡಿಮೆಯಾಗಿ ಅವರ ಜೀವನ ಸ್ಥಿತಿ ಹದಗೆಡುವುದು. ಆಂತರಿಕ ಮಾರುಕಟ್ಟೆ ಕ್ಷಯಿಸುವುದು. ಭೂಮಾಲಕರಿಗೆ, ಬಂಡವಾಳಶಾಹಿಗಳಿಗೆ ವಿದೇಶಿ ಮಾರುಕಟ್ಟೆಗಳಲ್ಲಿ ಲಾಭ ಗಿಟ್ಟಿಸಲು ಕಡ್ಡಾಯಠೇವಣಿಯಿಂದ ಸರಕಾರ ಸಹಾಯಧನ ಕೊಡುವುದರಿಂದ ಆದಾಯ ಸಂಪತ್ತು ಬಡವರಿಂದ ಶ್ರೀಮಂತರಿಗೇ ಹರಿದು ಬರುವುದು.

ತೆರಿಗೆದಾರರಲ್ಲಾಗಲೀ, ಕಾರ್ಮಿಕ ನೌಕರರಲ್ಲಾಗಲೀ ಹಣ ಇರುವುದರಿಂದ ಹಣದುಬ್ಬರ ಉಂಟಾಗುವುದಿಲ್ಲ. ತೆರಿಗೆ ತಪ್ಪಿಸುವವರಿಂದ, ಕಪ್ಪುಹಣ ಇರುವವರಿಂದ, ಕಾಳಸಂತೆಕದೀಮರಿಂದ, ಅಕ್ರಮ ಸಂಗ್ರಹಕಾರರಿಂದ ಮಾರುಕಟ್ಟೆಯಲ್ಲಿ ಕೃತಕ ಕೊರತೆ ಪರಿಸ್ಥಿತಿ ಉಂಟಾಗಿ, ಬೆಲೆಏರಿಕೆ ಹಣದುಬ್ಬರ ಉಂಟಾಗುವುದೆಂದು ಎಲ್ಲರಿಗೂ ತಿಳಿದಿದೆ. ಇಂತಹ ಸಮಾಜಘಾತುಕರಿಗೆ ಕಠಿಣ ಶಿಕ್ಷೆ ವಿಧಿಸಬೇಕು, ಅವರ ಆಸ್ತಿ ಆದಾಯಗಳ ಮೂಲ ಶೋಧಿಸಿ ಸೂಕ್ತ ತೆರಿಗೆ ವಸೂಲು ಮಾಡಬೇಕು, ಅಕ್ರಮಗಳಿಕೆಗೆ ಸರಕಾರ ಮುಟ್ಟುಗೋಲು ಹಾಕಬೇಕು. ಆದರೆ ಇದು ತನಕ ಸರಕಾರ ಈ ದಿಸೆಯಲ್ಲಿ ನಿರ್ವೀರ್ಯವಾಗಿದೆ. ಆರ್ಥಿಕ ವ್ಯವಸ್ಥೆಯಲ್ಲಿ ರೂ. 30000 ಕೋಟಿಯಷ್ಟು ಕಪ್ಪುಹಣ ನಗದು ಹಾಗೂ ಸ್ಥಿರಚರ ಆಸ್ತಿಗಳ ರೂಪದಲ್ಲಿದೆ. ಆದಾಯ ತೆರಿಗೆ ಬಾಕಿ ರೂ. 600 ಕೋಟಿಗೂ ಮೀರಿದೆ. ಕಳೆದ ಎರಡು ವರ್ಷಗಳಲ್ಲಿ ರೂ. 32 ಕೋಟಿಯಷ್ಟು ಆದಾಯ ತೆರಿಗೆ ವಸೂಲಿಯಾಗದೆ ಕೈಬಿಡಲಾಗಿದೆ (written off). ಗ್ರಾಮೀಣ ಪ್ರದೇಶಗಳಲ್ಲಿ ದೊಡ್ಡ ಭೂಮಾಲಕರನ್ನೂ ಶ್ರೀಮಂತ ರೈತರನ್ನೂ ಆದಾಯ ಹಾಗೂ ಆಸ್ತಿ ತೆರಿಗೆಗಳಿಂದ ಹೊರಗುಳಿಸಲಾಗಿದೆ. ಪ್ರಾಮಾಣಿಕ ತೆರಿಗೆದಾರರ ಮೇಲೆ, ಕಾರ್ಮಿಕರ ಮೇಲೆ, ನೌಕರರ ಮೇಲೆ ಆರ್ಥಿಕ ದುಃಸ್ಥಿತಿಯ, ದುರಾಡಳಿತೆಯ ಭಾರವನ್ನೆಲ್ಲಾ ಹರಿಸಲಾಗುತ್ತಿದೆ.

## ಚೆಕ್ ಮೂಲಕ ಮರು ಪಾವತಿ

ಬ್ಯಾಂಕು ಮತ್ತಿತರ ಸಂಸ್ಥೆಗಳಲ್ಲಿರಿಸಿದ ದೀರ್ಘಾವಧಿ ಠೇವಣಿಯನ್ನು ಅವಧಿ ಮುಗಿದ ಮೇಲೆ ಬಡ್ಡಿ ಸಹಿತ ರೂ. 10,000ಕ್ಕೂ ಮೇಲ್ಪಟ್ಟಿದ್ದರೆ ಠೇವಣಿದಾರರ ಖಾತೆಗೇ ಸೇರುವಂತೆ ಚೆಕ್ ಮೂಲಕ ಮರುಪಾವತಿ ಮಾಡುವ ಹೊಸ ಆಧ್ಯಾದೇಶ ಹೊರಡಿಸಲಾಗಿದೆ. ಇದರಿಂದ, ಕಪ್ಪುಹಣವುಳ್ಳವರು ಬಿನಾಮಿ ಹೆಸರಿನಲ್ಲಿ ಠೇವಣಿ ಇಡುವುದನ್ನು ತಪ್ಪಿಸಲು ಉದ್ದೇಶಿಸಲಾಗಿದೆ. ಉದ್ದೇಶವೇನೊ ಒಳ್ಳೆಯದೆ. ಆದರೆ, ಕಪ್ಪುಹಣವನ್ನು ದೀರ್ಘಾವಧಿ ಠೇವಣಿಯಲ್ಲಿ ಬಿನಾಮಿ ಹೆಸರಿನಲ್ಲಿ ಎಷ್ಟು ಇಡಲಾಗಿದೆ ಎಂದು ಸರಕಾರಕ್ಕಾಗಲೀ, ರಿಸರ್ವ್ ಬ್ಯಾಂಕಿಗಾಗಲೀ ಸ್ಪಷ್ಟ ಕಲ್ಪನೆ ಇಲ್ಲ. ತಜ್ಞರ ಅಭಿಪ್ರಾಯದಂತೆ, ಕಪ್ಪುಹಣವನ್ನು ಸ್ಥಿರಚರ ಆಸ್ತಿಗಳಲ್ಲಿಯೇ ಹೆಚ್ಚಾಗಿ ತೊಡಗಿಸಲಾಗಿದೆ. ಕಪ್ಪುಹಣ ಚಲಾವಣೆಯಾಗುವುದಾದರೂ ನಗದು ರೂಪದಲ್ಲಿ, ಬ್ಯಾಂಕು ಖಾತೆಗಳ ಮೂಲಕವಲ್ಲ. ಕಪ್ಪುಹಣ ವಿನಿಯೋಗವಾಗುವುದೂ ಅಕ್ರಮ ವ್ಯವಹಾರಗಳಿಗೆ, ಭ್ರಷ್ಟಾಚಾರಕ್ಕೆ, ಕಳ್ಳಸಂತೆ ವ್ಯಾಪಾರಕ್ಕೆ, ಚುನಾವಣೆಗಳಿಗೆ.

ಕಪ್ಪುಹಣವನ್ನು ಆರ್ಥಿಕ ವ್ಯವಸ್ಥೆಯಿಂದ ತೆಗೆದುಹಾಕಬೇಕಾದರೆ, ಒಂದು ದಶಕದ ಹಿಂದೆ ವಾಂಛೂ ಸಮಿತಿಯು ಸಲಹೆ ಮಾಡಿದರಂತೆ : 1. ರೂ. 500ಕ್ಕಿಂತ ಹೆಚ್ಚಿನ ಎಲ್ಲಾ ಪಾವತಿಗಳನ್ನು ಚೆಕ್ ಮೂಲಕವೇ ಮಾಡಬೇಕು, ನಗದು ರೂಪದಲ್ಲಿ ಮಾಡಕೂಡದು, 2. ರೂ. 10ಕ್ಕಿಂತಲೂ ಹೆಚ್ಚಿನ ಮೌಲ್ಯದ ನೋಟುಗಳನ್ನೆಲ್ಲಾ ಒಮ್ಮೆ ಅನಾಣ್ಯಕರಿಸಬೇಕು (demonetisation) ಅವುಗಳ ಬದಲಿಗೆ, ಸಂಬಂಧಪಟ್ಟವರ ಆಸ್ತಿ ಆದಾಯಗಳ ಮೂಲ ಶೋಧಿಸಿ ಸರಿಕಂಡಷ್ಟೇ ಹೊಸ ನೋಟುಗಳನ್ನು ಕೊಡಬೇಕು. ಇತ್ತೀಚೆಗಿನ ಪಾರ್ಲಿಮೆಂಟರಿ ಸಮಿತಿ (Estimates Committee of Parliament)ಯ ಸಲಹೆಯಂತೆ: 1. ರೂ. 2000/3000ಕ್ಕಿಂತ ಹೆಚ್ಚು ನಗದು ಹಣ ಇಟ್ಟುಕೊಳ್ಳಬಾರದು. ಈ ಮೌಲ್ಯಕ್ಕಿಂತ ಹೆಚ್ಚಿನ ಹಣವನ್ನು ಚೆಕ್‌ಗಳ ಮೂಲಕವೇ ಪಾವತಿ ಮಾಡಬೇಕು, 2. ರೂ. 5000ಕ್ಕಿಂತ ಹೆಚ್ಚಿನ ಮೌಲ್ಯದ ಆಸ್ತಿ ಖರೀದಿಸಿದರೆ, ಅದನ್ನು ಆದಾಯ ತೆರಿಗೆಯಾ

ಲೆಕ್ಕಪತ್ರಗಳಲ್ಲಿ ದಾಖಲೆ ಮಾಡಬೇಕು, 3. ದೊಡ್ಡದೊಡ್ಡ ಕಂಪೆನಿಗಳು ನ್ಯಾಯವಾದಿಗಳಿಗೆ, ವೈದ್ಯಕೀಯ ಪರೀಕ್ಷಕರಿಗೆ, ಲೆಕ್ಕಪತ್ರ ಪರಿಶೋಧಕರಿಗೆ, ಕಟ್ಟಡಗಳ ಮಾಲಕರಿಗೆ, ಇಂಜಿನಿಯರುಗಳಿಗೆ ಮಾಡುವ ಪಾವತಿಯಲ್ಲಿಯೇ ಆದಾಯ ತೆರಿಗೆಯನ್ನು ಕಳೆದುಕೊಂಡು ತೆರಿಗೆ ಇಲಾಖೆಗೆ ಕಳಿಸಬೇಕು. ನೌಕರರ ಸಂಬಳದಲ್ಲಿ ಆದಾಯ ತೆರಿಗೆ ಕಳೆದು ಕಳಿಸಿದಂತೆ. 4. ವ್ಯಾಪಾರ, ಕೈಗಾರಿಕೆಗಳ ಉದ್ಯಮಿಗಳಿಗಿಂತ, ಕಾರ್ಮಿಕರ ಹಾಗೂ ನೌಕರರ ಮತ್ತು ಸ್ವಂತ ಉದ್ಯೋಗಸ್ಥರ ಆದಾಯದ ಮೇಲೆ ಕಡಿಮೆ ದರದಲ್ಲಿ ತೆರಿಗೆ ವಿಧಿಸಬೇಕು.

ಆದರೆ, ಸರಕಾರದಲ್ಲಿರುವ ರಾಜಕೀಯ ಪುಢಾರಿಗಳೂ, ಭ್ರಷ್ಟ ಆಡಳಿತಾಧಿಕಾರಿಗಳೂ ಕಪ್ಪುಹಣವಂತರೊಡನೆ ಮೈತ್ರಿಯಲ್ಲಿರುವಾಗ ಯಾವ ಸಲಹೆಯನ್ನೂ ಸ್ವೀಕರಿಸುವ ಸ್ಥಿತಿಯಲ್ಲಿಲ್ಲ. ಏನಾದರೂ ಜನರ ಕಣ್ಣಿಗೆ ಮಣ್ಣೆರಚುವ ಕೆಲವು ಕ್ರಮ ಕೈಗೊಳ್ಳುವರು ಅಷ್ಟೆ.

## ಬ್ಯಾಂಕುಸಾಲದ ಮೇಲೆ ಮಿತಿ, ಬಡ್ಡಿ ಹೆಚ್ಚಳ

ಈ ಕ್ರಮದಿಂದ ವಾಣಿಜ್ಯ ಬ್ಯಾಂಕುಗಳ ಮೂಲಕ ನಡೆಯುವ ಹಣದ ಸಂಚಾರವನ್ನು ಮುಂದಿನ ತಿಂಗಳುಗಳಲ್ಲಿ ರೂ. 800 ಕೋಟಿಯಷ್ಟು ಕಡಿಮೆಗೊಳಿಸಿ ಹಣದುಬ್ಬರ ಹತೋಟಿಗೆ ತರಲು ಉದ್ದೇಶಿಸಲಾಗಿದೆ, ಆದರೆ, ಹಲವಾರು ಕಾರಣಗಳಿಂದ ಹಣದುಬ್ಬರವು ಹೆಚ್ಚುತ್ತಲೇ ಇರುವುದರಿಂದ ಬ್ಯಾಂಕುಸಾಲಪಡೆದು ವ್ಯಾಪಾರೋದ್ಯಮ ನಡೆಸುವವರಿಗೆ ಬ್ಯಾಂಕು ಸಾಲದ ಬಡ್ಡಿದರ ಏರಿಕೆಯಿಂದ ನಷ್ಟವೇನೂ ಇಲ್ಲ. ಎಲ್ಲಿಯವರೆಗೆ ಅವರ ನಿವ್ವಳಲಾಭದ ದರವು ಕಡಿಮೆಯಾಗುವುದಿಲ್ಲವೋ ಅಲ್ಲಿಯವರೆಗೆ ಅವರು ಎಷ್ಟು ಬಡ್ಡಿ ಕೊಟ್ಟಾದರೂ ಸಾಲಪಡೆದು ತಮ್ಮ ವ್ಯವಹಾರ (ಅವ್ಯವಹಾರ ?)ಗಳನ್ನು ಮುಂದುವರಿಸುತ್ತಲೇ ಇರುವರು. ಬ್ಯಾಂಕುಸಾಲದ ಸಿಂಹಪಾಲು ದೊಡ್ಡ ಕುಳವಾರುಗಳಿಗೇ ಸಿಗುವುದರಿಂದ, ಬಡ್ಡಿ ಹೆಚ್ಚಳದಿಂದಾಗಲೀ ಸಾಲದ ಮೇಲಿನ ಮಿತಿಹೇರಿಕೆಯಿಂದಾಗಲೀ ಅವರಿಗೇನೂ ಹೆಚ್ಚು ತೊಂದರೆಯಾಗುವುದಿಲ್ಲ. ಬದಲು, ಸಣ್ಣಪುಟ್ಟ ವ್ಯಾಪಾರೋದ್ಯಮಿಗಳು, ಸಣ್ಣ ಹಾಗೂ ಮಧ್ಯಮವರ್ಗದ ಕೈಗಾರಿಕಾ ಸಂಸ್ಥೆಗಳು ಅಪಾರ ಕಷ್ಟನಷ್ಟಗಳಿಗೊಳಗಾಗಿ ದಿವಾಳಿಯಾಗುವ ಸಂಭವವಿದೆ. ಉತ್ಪಾದನೆಗೆ ಸಾಕಷ್ಟು ಬ್ಯಾಂಕು ಸಾಲದ ಸವಲತ್ತು ಸಿಗದೇ ಹೋದರೆ, ಉತ್ಪಾದನೆ ಕುಂಠಿತವಾಗಿ, ಕೊರತೆ ಪರಿಸ್ಥಿತಿಉಂಟಾಗಿ, ಮತ್ತಷ್ಟು ಬೆಲೆಏರಿಕೆ ಹಾಗೂ ಹಣದುಬ್ಬರ ಉಂಟಾಗುವುದು. ಬ್ಯಾಂಕು ವ್ಯವಹಾರಗಳಿಗೆ ಸಮಾನಾಂತರವಾಗಿ ಕಪ್ಪುಹಣದ ಚಲಾವಣೆಯಿರುವುದರಿಂದ ಇಂತಹ ಸಾಂಪ್ರದಾಯಿಕ ಕ್ರಮಗಳಿಂದ ಹೆಚ್ಚಿನ ಪ್ರಯೋಜನವಾಗಲಾರದು. ಸರಕಾರದ ಹಾಗೂ ಖಾಸಗೀ ಕ್ಷೇತ್ರದಲ್ಲಿ ಅನವಶ್ಯಕವಾದ ಅನುತ್ಪಾದಿತ ವೆಚ್ಚಗಳಿಗೆ ನೂರಾರು ಕೋಟಿ ಹಣ ಪೋಲಾಗುತ್ತಿರುವುದನ್ನು ತಡೆಹಿಡಿಯದೆ, ಕೇವಲ ಬ್ಯಾಂಕುಸಾಲ ಕಡಿತದಿಂದ ಹಣದುಬ್ಬರದ ಪರಿಸ್ಥಿತಿ ಸುಧಾರಿಸಲಾರದು.

## ಗೋದಿ ಆಮದು

ಸಾರ್ವಜನಿಕ ವಿತರಣೆಗೆ ವರ್ಷಕ್ಕೆ 6.5 ಮಿ. ಟನ್ ಗೋದಿ ಮತ್ತು 5.4 ಮಿ.ಟನ್ ಅಕ್ಕಿ, ಒಟ್ಟು ಸುಮಾರು 12 ಮಿ. ಟನ್ ಆಹಾರಧಾನ್ಯಗಳ ಅಗತ್ಯವಿದೆ ಎಂದು ಸರಕಾರದ್ದೇ ಅಂದಾಜು. ಇದರ ಇಮ್ಮಡಿ, 24 ಮಿ. ಟನ್‌ಗಳಷ್ಟು ಸಂಗ್ರಹ ಸರಕಾರದೊಡನಿದ್ದರೆ, ಅನಿರೀಕ್ಷಿತ ಪರಿಸ್ಥಿತಿಗಳಲ್ಲಿಯೂ ಸಾರ್ವಜನಿಕ ವಿತರಣಾ ವ್ಯವಸ್ಥೆ ನಡೆಸಬಹುದು (ಸಾರ್ವಜನಿಕ ವಿತರಣೆಯು ಹೆಚ್ಚಿನ ಗ್ರಾಮೀಣ ಪ್ರದೇಶಗಳಿಗೆ ಇನ್ನೂ ವಿಸ್ತರಿಸದಿರುವುದನ್ನು ಗಮನಿಸಬೇಕು). ಕಳೆದ ವರ್ಷಕ್ಕಿಂತ ಈ ವರ್ಷ ಆಹಾರಧಾನ್ಯಗಳ ಉತ್ಪಾದನೆಯು ಉತ್ತಮವಾಗಿದ್ದು, ರಬಿ ಬೆಳೆಯಲ್ಲಿ 9.5 ಮಿ. ಟನ್ ಗೋದಿ ಸಾರ್ವಜನಿಕ ವಿತರಣೆಗಾಗಿ ಸಂಗ್ರಹಿಸಲು ನಿರ್ಧರಿಸಲಾಗಿತ್ತು. ಆದರೆ, ಇದು ತನಕದ ಸಂಗ್ರಹ 6 ಮಿ. ಟನ್ ಮೀರಲಿಲ್ಲ. ಇಷ್ಟು ಸಂಗ್ರಹ ಕಳೆದ ಬರಗಾಲದ ವರ್ಷದಲ್ಲಿಯೂ ಆಗಿತ್ತು. ಈಗ ಸರಕಾರದ ಒಟ್ಟು ಆಹಾರಧಾನ್ಯ ಸಂಗ್ರಹ 13 ಮಿ. ಟನ್‌ಗೆ ಇಳಿದಿದೆ. ಆ ನೆಪದಿಂದ ಕೆಲಸಕ್ಕೆ-ಕಾಳು ಕಾರ್ಯಕ್ರಮದಂತೆ ಆಹಾರಧಾನ್ಯಗಳನ್ನು ರಾಜ್ಯಗಳಿಗೆ ಬಿಡುಗಡೆ ಮಾಡುವುದನ್ನೂ ನಿಲ್ಲಿಸಲಾಗಿದೆ. ಸುಭಿಕ್ಷೆಯ ಕಾಲದಲ್ಲಿಯೂ ಮಾರುಕಟ್ಟೆಗೆ ಆಹಾರಧಾನ್ಯಗಳು ಸಾಕಷ್ಟು ಬರುತ್ತಿಲ್ಲ. ಅವುಗಳ ಬೆಲೆಗಳು ಏರುತ್ತಲೇ ಇವೆ. ಶ್ರೀಮಂತ ರೈತರು, ದೊಡ್ಡ ಭೂಮಾಲಕರು ತಮ್ಮ ಸಂಗ್ರಹವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡದೆ ತಡೆಹಿಡಿದಿದ್ದಾರೆ. ಅವರು ತಮ್ಮ ದಾಸ್ತಾನು ಬಿಡುಗಡೆ ಮಾಡುವಂತೆ ಪ್ರಚೋದಿಸಲು ಅಮೇರಿಕದಿಂದ 1.5 ಮಿ. ಟನ್ (ಬೇಕಾದರೆ ಇನ್ನೂ ಹೆಚ್ಚು !) ಗೋದಿ ಆಮದು ಮಾಡಲು ನಿರ್ಧರಿಸಲಾಗಿದೆ ! ಅಮೇರಿಕದಿಂದ ಬಹಳ ಅಗ್ಗದಲ್ಲಿ ಈಗಾಗಲೇ ಗೋದಿ ಖರೀದಿಸಿದ್ದೇವೆ ಎಂದು ಸರಕಾರದ ವಕ್ತಾರರು ತಮ್ಮ ಸಾಹಸವನ್ನು ಮೆರೆಸುತ್ತಿದ್ದಾರೆ !

ಸುಭಿಕ್ಷೆಯ ಕಾಲದಲ್ಲಿಯೂ ಗೋದಿ ಆಮದು ಯಾಕೆ ? ಬೆಲೆಏರಿಕೆಯ ಪರಿಸ್ಥಿತಿಯಲ್ಲಿ ಜನರ ಗ್ರಾಹಕ ಶಕ್ತಿ ಕುಸಿಯುತ್ತಲೇ ಬಂದುದರಿಂದ ಅವರ ಆಹಾರ ಸೇವನೆ ಏನೂ ಹೆಚ್ಚಾಗಲಿಲ್ಲ. ಹಾಗಾದರೆ ಬೆಳೆದದ್ದು ಏನಾಯಿತು ?

1. ಪಂಜಾಬ್, ಹರಿಯಾಣ ಮತ್ತು ಉತ್ತರಪ್ರದೇಶದ ಕಾಂಗ್ರೆಸ್ (ಐ) ಸರಕಾರಗಳು ಲೆವಿ ಗೋದಿ ಸಂಗ್ರಹಿಸಲು ವಿಫಲವಾದವು. ಈ ರಾಜ್ಯಗಳ ಆಳುವ ಪಕ್ಷದ ಪುಢಾರಿಗಳು ತಮ್ಮ ಗುಂಪುಘರ್ಷಣೆಗಳಲ್ಲಿಯೇ ನಿರತರಾಗಿದ್ದಾರೆ.

2. ಈ ರಾಜ್ಯಗಳಿಂದ ಮಧ್ಯಪೂರ್ವ ದೇಶಗಳಿಗೂ, ಪಾಕಿಸ್ತಾನಕ್ಕೂ ಬೃಹತ್ ಪ್ರಮಾಣದಲ್ಲಿ ಗೋದಿ ಕಳ್ಳಸಾಗಾಣಿಕೆಯಾಗುತ್ತಿದೆ. ಕೇಂದ್ರಸರಕಾರ ಮತ್ತು ರಾಜ್ಯಸರಕಾರಗಳು ಕಳ್ಳ ಸಾಗಾಣಿಕೆಯನ್ನು ತಡೆಯಲು ನಿಷ್ಕ್ರಿಯವಾಗಿವೆ. ಕಾರಣ, ಆಳುವ ಪಕ್ಷದ ಆಧಾರಸ್ತಂಭಗಳಾದ ಭೂಮಾಲಕರೂ, ಶ್ರೀಮಂತ ರೈತರೂ, ಸಗಟು ವ್ಯಾಪಾರಿಗಳೂ ಈ ಕಳ್ಳ ಸಾಗಾಣಿಕೆಯಲ್ಲಿ ಕೈಹಾಕಿರುವರು !

3. ಕೃಷಿ ಉತ್ಪಾದನೆಯ ವೆಚ್ಚಕ್ಕನುಗುಣವಾಗಿ ಆಹಾರಧಾನ್ಯಗಳ ಬೆಲೆ ನಿರ್ಧರಿಸಿ, ರೈತರು ಮಾರುಕಟ್ಟೆಗೆ ಮಾರಲಾಗಿಟ್ಟ ಆಹಾರಧಾನ್ಯಗಳನ್ನೆಲ್ಲಾ ಕಡ್ಡಾಯವಾಗಿ ಖರೀದಿಸಿ ದೇಶಾದ್ಯಂತ ಸಾರ್ವಜನಿಕ ವಿತರಣೆಯ ಹೊಣೆಗಾರಿಕೆ ವಹಿಸಲು ಸರಕಾರ ತಯಾರಿಲ್ಲ.

4. ಹೆಚ್ಚು ಬೆಲೆಯ ಅಮೇರಿಕದ ಗೋದಿಯನ್ನು ಸಾರ್ವಜನಿಕ ವಿತರಣೆಗೆ ಬಳಸುವುದರಿಂದ ಸರಕಾರದ ವೆಚ್ಚ ಹೆಚ್ಚಿ, ಕೊರತೆ ಹಾಗೂ ಕರಭಾರವೂ ಹೆಚ್ಚುವುದು, ಬೆಲೆಏರಿಕೆಯೂ ಮುಂದುವರಿಯುವುದು. ದೇಶದ ರಫ್ತಿಗಿಂತ ಆಮದು ಹೆಚ್ಚುತ್ತಿರುವಾಗ, ವಿದೇಶಿ ವಿನಿಮಯ ಸಂಗ್ರಹ ಇಳಿಮುಖವಾಗುತ್ತಿರುವಾಗ, ಅಗ್ಗದ ದರದಲ್ಲಿ ನಮ್ಮಲ್ಲಿಯೇ ಗೋದಿ ಸಿಗುವಾಗ, ಸುಭಿಕ್ಷೆಯ ವರ್ಷದಲ್ಲಿಯೂ ಗೋದಿ ಆಮದು ಮಾಡುವುದರಿಂದ, ದೇಶದ ಸ್ವಾವಲಂಬನೆ, ಸ್ವಾಭಿಮಾನಕ್ಕೆ ತಿಲಾಂಜಲಿಕೊಟ್ಟಂತಾಗಿದೆ. ಸರಕಾರದ ದಿವಾಳಿಕೋರ ಆರ್ಥಿಕನೀತಿ ಪ್ರಕಟವಾದಂತಾಗಿದೆ.

## ಪೆಟ್ರೋಲಿಯಂ ಉತ್ಪಾದನೆಗಳ ಬೆಲೆಹೆಚ್ಚಳ

ಒಂದೇ ವರ್ಷದಲ್ಲಿ ಇದೀಗ ಮೂರನೇ ಸಲ ಪೆಟ್ರೋಲಿಯಂ ಪದಾರ್ಥಗಳ ಬೆಲೆಗಳನ್ನು ಹೆಚ್ಚಿಸಲಾಗಿದೆ. (ಈ ಸಲ ಅರಬ್ ರಾಷ್ಟ್ರಗಳು ತಮ್ಮ ತೈಲ ಬೆಲೆ ಹೆಚ್ಚಿಸಲಿಲ್ಲ. ಬದಲು ಸೌದಿಅರೇಬಿಯಾದ ತೈಲ ಬೆಲೆಯನ್ನು ಶೇ. 10ರಷ್ಟು ಇಳಿಸಲಾಗಿದೆ!) ಪರಿಣಾಮವಾಗಿ, ರೂ. 1072 ಕೋಟಿಯಷ್ಟು ಪೆಟ್ರೋಲಿಯಂ ಪದಾರ್ಥಗಳ ಮೇಲೂ, ರೂ. 576 ಕೋಟಿ ರಸಗೊಬ್ಬರಗಳ ಮೇಲೂ ಕೃಷಿ ಮತ್ತು ಕೈಗಾರಿಕಾವಲಯಗಳು ಹೆಚ್ಚು ಬೆಲೆ ತೆರಬೇಕಾಗುವುದು, ಸಾರಿಗೆ ಸೇವೆಗಳ ದರಗಳೂ ಏರುವುವು. ಕೃಷಿ ಹಾಗೂ ಕೈಗಾರಿಕಾ ಉತ್ಪಾದನೆಗಳ ಬೆಲೆಗಳೂ ವಿಪರೀತ ಏರುವುವು. ಈ ಕ್ರಮವು ಇನ್ನೊಮ್ಮೆ ಗಣನೀಯ ಪ್ರಮಾಣದಲ್ಲಿ ಜನರ ಮೇಲೆ ಅಪ್ರತ್ಯಕ್ಷ ತೆರಿಗೆ ಹಾಕಿದಂತಾಗಿದೆ (ಮೊದಲು ವರ್ಷಕ್ಕೆ ಒಮ್ಮೆ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ತೆರಿಗೆ ಮುಂಗಡ ಪತ್ರದಲ್ಲಿ ಸೂಚಿಸಲಾಗುತ್ತಿದ್ದರೆ, ಕಾಂಗ್ರೆಸ್(ಐ)ಯ ಹೊಸ ಆಡಳಿತಾವಧಿಯಲ್ಲಿ ವರ್ಷಕ್ಕೆ 3-4 ಬಾರಿ ಒಂದಲ್ಲ ಒಂದು ವಿಧದ ತೆರಿಗೆಯನ್ನು ಜನರ ಮೇಲೆ ಹೇರಿಸಲಾಗುತ್ತಿದೆ!) ಉದ್ದೇಶ ಪೆಟ್ರೋಲಿಯಂ ಪದಾರ್ಥಗಳ ಬಳಕೆ ಕಡಿಮೆ ಮಾಡಬೇಕೆಂದು ಮತ್ತು ಅವುಗಳ ಆಮದು ಖರ್ಚು ಕಡಿಮೆ ಆಗಬೇಕೆಂದು. ಆದರೆ, ಇಷ್ಟರವರೆಗಿನ ಅನುಭವದಂತೆ, ಬೆಲೆ ಏರಿಕೆಯಿಂದ ಜೀವನಾವಶ್ಯಕವಾದ ಪೆಟ್ರೋಲಿಯಂ ಪದಾರ್ಥಗಳ, ರಸಗೊಬ್ಬರಗಳ ಬಳಕೆ ಕಡಿಮೆಯಾಗುವುದು ಕಷ್ಟಸಾಧ್ಯ. ಸರಕಾರದ ವಲಯದಲ್ಲಿ ಹಾಗೂ ಶ್ರೀಮಂತ ವರ್ಗದಲ್ಲಿ ತಮ್ಮ ವಾಹನಗಳಿಗೆ ಪೆಟ್ರೋಲ್ ಬಳಸುವುದನ್ನು ಕಡಿಮೆ ಮಾಡುವುದೇ ಇಲ್ಲ. ಆದುದರಿಂದ, ಅನವಶ್ಯಕ ವಿಷಯಗಳಿಗೆ ಅವುಗಳನ್ನು ಬಳಸಲು ತಡೆಯಲು ಮತ್ತು ಸಾಕಷ್ಟು ಮಿತವ್ಯಯಗೊಳಿಸಲು ಬೆಲೆ ಏರಿಸುವ ಬದಲು ನಿಶ್ಚಿತ ಪ್ರಮಾಣದಲ್ಲಿ ಗ್ರಾಹಕರಿಗೆ ಎಟಕುವ ದರಗಳಲ್ಲಿ ನ್ಯಾಯ ವಿತರಣೆ ನಡೆಸಬೇಕು. ಮುಖ್ಯವಾಗಿ ರಸಗೊಬ್ಬರ ಮತ್ತು ಸೀಮೆಎಣ್ಣೆಯ ವಿತರಣೆ ರೈತರಿಗೆ ಹಾಗೂ ಜನಸಾಮಾನ್ಯರಿಗೆ ಸುಲಭ ದರಗಳಲ್ಲಿ ಸಾರ್ವಜನಿಕ ವಿತರಣೆ ಮಾಡಬೇಕು. ಹೊಸ ಬೆಲೆ ಏರಿಕೆಯಿಂದಾಗಿ ಸಾರ್ವತ್ರಿಕವಾಗಿ ಹಣದುಬ್ಬರವು ನಾಗಾಲೋಟದಿಂದ ಹೆಚ್ಚುವ ಸಂಭವವಿದೆ.

## ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಹಣದುಬ್ಬರ ಅನಿವಾರ್ಯ

ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಹಣದುಬ್ಬರ, ಬೆಲೆಏರಿಕೆ ಶೋಷಣೆಯ, ಬಂಡವಾಳ ಶೇಖರಣೆಯ ಅನಿವಾರ್ಯ ಅಸ್ತ್ರವಾಗಿದೆ ಎಂಬುದನ್ನು ನೆನಪಿಡಬೇಕು. ಅಭಿವೃದ್ಧಿ ಹೊಂದುತ್ತಿರುವ ಭಾರತದಂತಹ ದೇಶದಲ್ಲಿ ಹೊಸ ಬಂಡವಾಳ ಹೂಡಲು, ನಿರಂತರ ಲಾಭಗಿಟ್ಟಿಸಲು, ಸ್ವಲ್ಪ ಪ್ರಮಾಣದಲ್ಲಿಯಾದರೂ ಹಣದುಬ್ಬರದ ಪರಿಸ್ಥಿತಿಯು ಇರಲೇಬೇಕೆಂದು ಅರ್ಥಮಂತ್ರಿ ವೆಂಕಟ್ರಾಮನ್ ಮೊದಲುಗೊಂಡು ಹಿಂದಿನ ಹಾಗೂ ಇಂದಿನ ಮಂತ್ರಿಗಳೂ ಅರ್ಥಶಾಸ್ತ್ರಜ್ಞರೂ ಅಭಿಪ್ರಾಯಪಡುತ್ತಾರೆ. 19ನೇ ಶತಮಾನದ ಯುರೋಪಿನ ಬಂಡವಾಳಶಾಹಿ ಪದ್ಧತಿಯಲ್ಲಿ ದೀರ್ಘಾವಧಿ ದುಡಿಮೆ, ಉಪವಾಸ ಮಟ್ಟದ ಕೂಲಿ, ವಸಾಹತುಗಳ ಶೋಷಣೆಗಳ ಮೂಲಕ ಬಂಡವಾಳ ಸಂಗ್ರಹಿಸಿ ಸಾಮ್ರಾಜ್ಯಶಾಹಿ ಬೆಳೆದು ಬಂತು. ಆದರೆ, ಹಿಂದೆ ವಸಾಹತುವಾಗಿದ್ದ ಭಾರತ ಇಂತಹ ಮಾರ್ಗಗಳನ್ನು ಅನುಸರಿಸಲು ಸಾಧ್ಯವಿಲ್ಲದೇ ಇದ್ದುದರಿಂದ, ನಿರುದ್ಯೋಗ ಹಾಗೂ ಹಣದುಬ್ಬರ ಇವುಗಳ ಮೂಲಕ ಜನಸಾಮಾನ್ಯರಿಂದ, ಬಡವರಿಂದ, ಶ್ರಮಿಕ ವರ್ಗದಿಂದ ಸಂಪತ್ತು ಆದಾಯಗಳನ್ನು ಶ್ರೀಮಂತವರ್ಗಕ್ಕೆ ಆಸ್ತಿವಂತರಿಗೆ ವರ್ಗಾಯಿಸಲಾಗುತ್ತಿದೆ. ಇಂದಿರಾ ಸರಕಾರ, ಈ ಮಾಸದ ಘಾಯಕ್ಕೆ ಮುಲಾಮು ಲೇಪಿಸುವ ಪ್ರಯತ್ನಿಸಬಹುದು ಅಷ್ಟೆ. ಈ ಸಮಸ್ಯೆಗಳ ಪರಿಹಾರಕ್ಕೆ ತಂತರ್ಕ್ರಮ ಕೈಕೊಳ್ಳಲಿಕ್ಕೂ, ಕ್ರಮೇಣ ಮೂಲಭೂತವಾದ ಕ್ರಾಂತಿಕಾರಕ ಕ್ರಮಕೈಕೊಳ್ಳಲಿಕ್ಕೂ ಎಡ-ಪ್ರಜಾಪ್ರಭುತ್ವ ಶಕ್ತಿಗಳ ಸಂಘಟಿತ ಹೋರಾಟ ಒಂದೇ ಖಚಿತ ದಾರಿ.

○

---

# ರೈತ ಸಂಘದ ಸಭೆ

**9**–7–81ರಂದು ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ಕೋಲಾರ ಜಿಲ್ಲಾ ರೈತಸಂಘದ ಸಭೆ ಸೇರಿತ್ತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಪಿ. ರಾಮಚಂದ್ರರಾವ್ ವಹಿಸಿದ್ದರು.

ಕೋಲಾರ ಜಿಲ್ಲೆಯ ರೈತರ ಆರ್ಥಿಕ ಜೀವನಾಡಿಯಾದ ರೇಷ್ಮೆ ಬೆಳೆಗೆ ಊಜಿನೊಣದ ಹಾವಳಿಯಿಂದ ರೈತರ ಆರ್ಥಿಕ ಪರಿಸ್ಥಿತಿ ತೀರ ಹದಗೆಟ್ಟಿದೆ. ರೇಷ್ಮೆ ಬೆಳೆಗಾರರ ಕುಂದುಕೊರತೆಗಳನ್ನು ಚರ್ಚಿಸಲು 24-8-81 ರಂದು ಸಮ್ಮೇಳನವೊಂದನ್ನು ಏರ್ಪಡಿಸಲು ಸಭೆ ತೀರ್ಮಾನಿಸಿತು.

ಈ ಸಮ್ಮೇಳನಕ್ಕೆ ಸಿದ್ಧತೆ ನಡೆಸಲು ಕಾಂ. ಲಕ್ಷ್ಮಣರೆಡ್ಡಿ, ಕೆ. ಎಂ. ವೆಂಕಟೇಶ, ಶ್ರೀನಿವಾಸ ರೆಡ್ಡಿ, ನಾರಾಯಣಸ್ವಾಮಿ ಈ ನಾಲ್ವರಿರುವ ಸ್ವಾಗತಸಮಿತಿಯನ್ನು ರಚಿಸಲಾಯಿತು.

ಜಿಲ್ಲೆಯಾದ್ಯಂತದ ರೈತರು ಈ ಸಮ್ಮೇಳದಲ್ಲಿ ಪಾಲ್ಗೊಳ್ಳುವಂತೆ ಶ್ರಮಿಸಲು ಸಭೆಯಲ್ಲಿ ತೀರ್ಮಾನಿಸಿತು.

---

# ಹಲ್ಲೆಯ ಖಂಡನೆ

**3**–8–81ರಂದು ಮೈಸೂರು ಸಿಟಿ ಕಾರ್ಪೊರೇಷನ್ ಎಂಪ್ಲಾಯೀಸ್ ಯೂನಿಯನ್ನಿನ ಸರ್ವಸದಸ್ಯರ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಕೋಶಾಧಿಕಾರಿ ಕಾಂ. ಕೆ. ತಿಮ್ಮೇಗೌಡರು ವಹಿಸಿದ್ದರು.

ಸಭೆಯು 28-7-81ರಂದು ಶಾಸಕ ಶ್ರೀ ಐ.ಪಿ.ಡಿ. ಸಾಲಪ್ಪನವರ ಮೇಲೆ ಕಾಂಗ್ರೆ ಗೂಂಡಾಗಳು ದಾಳಿ ಮಾಡಿದ್ದನ್ನು ಉಗ್ರವಾಗಿ ಖಂಡಿಸಿತು. ಈ ಬಗ್ಗೆ ಸೂಕ್ತ ವಿಚಾರಣೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಬೇಕೆಂದು ಸಭೆ ಒತ್ತಾಯಿಸಿತು.

●

---

# ಕರ್ನಾಟಕ ರಾಜ್ಯದಲ್ಲಿ

## ಅಭಾವ ಪರಿಹಾರ

ರಾಜ್ಯದ ಅಭಾವಪೀಡಿತ ಪ್ರದೇಶಗಳ ಸ್ಥಿತಿಗತಿ ಕುರಿತಂತೆ ಮೇಲ್ಮನೆಯು ಎರಡೂ ಕಡೆ ಸದಸ್ಯರು ಸರಕಾರವನ್ನು ತರಾಟೆಗೆ ತೆಗೆದುಕೊಂಡರಂತೆ. ವಿಶೇಷ ಚರ್ಚೆಯ ಮೂಲಕ ಸರ್ಕಾರದ ಗಮನ ಸೆಳೆದ ಆಳುವಪಕ್ಷ ಹಾಗೂ ವಿರೋಧಿ ಪಕ್ಷದ ಸದಸ್ಯರು ಸರಕಾರದ ಸಾಧನೆ ಬರೀ "ಪುಸ್ತಕದ ಬದನೆಕಾಯಿ" ಮಾತ್ರ ಎಂದು ವಾದಿಸಿದರಂತೆ.

ರಾಜ್ಯಾದ್ಯಂತ 151ಕ್ಕೂ ಮೇಲ್ಪಟ್ಟು ತಾಲ್ಲೂಕುಗಳು ಬರಗಾಲಕ್ಕೆ ತುತ್ತಾಗಿ ಲಕ್ಷಾವಧಿ ಜನ ಉಪಜೀವನದ ಹಾದಿ ಹುಡುಕಿಕೊಂಡು ಪರಪ್ರಾಂತಗಳಿಗೆ ಹೋಗಿದ್ದಾರಲ್ಲದೆ, ಈ ತಾಲ್ಲೂಕುಗಳ ಹಳ್ಳಿ ಜನರಿಗೆ ಕೆಲಸವಿಲ್ಲವಷ್ಟೇಯಲ್ಲ, ದನಗಳಿಗೆ ಮೇವು ಹಾಗೂ ಕುಡಿಯುವ ನೀರು ಕೂಡ ಸಿಗುತ್ತಿಲ್ಲೆಂಬ ಸಂಗತಿ ಜಗತ್ತಿಗೆ ತಿಳಿದಿದ್ದರೂ ಸರಕಾರ "ಇದೇನು ಮಹಾ ಸಮಸ್ಯೆ" ಎಂದು ತಿಳಿದು ಕೂತಿದೆ. ಕೇಂದ್ರಕ್ಕೆ ಕೈಚಾಚುವ ಕೆಲಸ ಮಾಡಿ ಕೇಂದ್ರದಿಂದ ಕೋಟ್ಯಾವಧಿ ರೂಪಾಯಿ ಪರಿಹಾರಧನ ಪಡೆದಾಯಿತು. ಮಂತ್ರಿ ಇಬ್ರಾಹಿಂರವರ ಗಲಾಟೆಯಲ್ಲಿ ಈ ಹಣ ಯಾವ ತೂತಿನಲ್ಲಿ ಹರಿದುಹೋಯಿತೆಂಬ ಸಂಗತಿ ವಿಧಾನಪರಿಷತ್ತಿನ ಸದಸ್ಯರ ಗಮನಕ್ಕೆ ಬಂದಿರಲಿಕ್ಕಿಲ್ಲ. ಹಾಗಾದರೆ ಅಭಾವ ಪರಿಹಾರದ ಹಣವೆಲ್ಲ ಗುಂಡೂರಾವ್-ಖಾನ್ ಕಂಪೆನಿಯ ಕೆರೆ ನೀರನ್ನು ಸೇರಿರಬೇಕೆಂಬ ಸಂಶಯ ಉಂಟಾದರೆ ಅಸತ್ಯವಾಗಲಿಕ್ಕಿಲ್ಲವಲ್ಲ!

## ಶಾಸಕರ ಭವನದಲ್ಲಿ ಕುಡಿತದ ಕುಮ್ಮಕ್ಕು

"ಶಾಸಕರ ಭವನದಲ್ಲಿ ಉಳಿದುಕೊಂಡಿರುವ ಕೆಲವು ದೊಡ್ಡ ದೊಡ್ಡವರು ಕುಡಿದುಕುಪ್ಪಳಿಸಿ ಹಗಲು ರಾತ್ರಿ ಎನ್ನದೆ ಸದಾ ಇಸ್ಪೀಟು ಆಡುತ್ತ ಕುರ್ಚಿ ಮೇಜುಗಳಿಂದ ಹೊಡೆದಾಡಿ ಮಾಡಬಾರದ ಕೆಲಸ ಮಾಡುತ್ತಿದ್ದಾರಲ್ಲ... ಸಭ್ಯ ಶಾಸಕರ ಗತಿಯಾದರೂ ಏನು?" ಶಾಸಕ ಹೊರಟ್ಟಿಯವರು ವಿಧಾನ ಪರಿಷತ್ತಿನಲ್ಲಿ ಹೊರಹಾಕಿದ ಹೊಲಸು. ಜನರ ಸಮಸ್ಯೆಗಳನ್ನು ಜನರೇ ಬಗೆಹರಿಸಿಕೊಳ್ಳಲು ಮುಂದಾದಾಗ ಅಥವಾ "ನನ್ನ ಹಣೆಬರಹದಲ್ಲಿ ಬರೆದಿಟ್ಟದ್ದು ಇದೇ" ಎಂದುಕೊಂಡು ಬಿಟ್ಟಿಸೆರೆ ಕುಡಿದು ಇಂದಿರಾ ಕಾಂಗ್ರೆಸ್ ರಾಜ್ಯವನ್ನು ಬಿಟ್ಟೋಡುತ್ತಿರುವಾಗ ಹೊಲಸು ಮಾಡುವುದು ಬಿಟ್ಟು ಶಾಸಕರಿಗೆ ಕೆಲಸವಾದರೂ ಏನಿದೆ. 5ವರ್ಷಕ್ಕೊಂದು ಸಲ ಇಂದಿರಾಮಾತೆಯ ಮನ ಒಲಿಸಲು "ಮಹಾಪೂಜೆ"ಮಾಡಿ ಟಿಕೆಟ್ ಗಿಟ್ಟಿಸಿಕೊಂಡರೆಸಾಕು. ವಿಧಾನಸಭೆ-ವಿಧಾನಪರಿಷತ್ ಸದಸ್ಯತ್ವ ಪಡೆದಾತ ಶಾಸಕರ ಭವನದಲ್ಲಿ ಕುಡಿದು, ತಿಂದು ಇಸ್ಪೀಟು ಆಡಿ ಹೊಲಸು ಮಾಡದೆ ಮತ್ತೇನು ಕಮಾಯಿ ಮಾಡಬೇಕೆಂದು ಹೊರಟ್ಟಿಯವರ ಆಸೆಯೋ ಏನೋ ಯಾರಿಗೂ ತಿಳಿಯದು. ಹೊರಟ್ಟಿಯವರು ತಡವಾಗಿ ಈ ಹೊಲಸಿನ ಹೊನಲನ್ನು ಹಮ್ಮಿಕೊಂಡಂತೆ ಕಂಡುಬರುತ್ತದೆ. ಕುರುಡನೂ-ಆನೆಯೂ ಎಂಬ ಕತೆಯನ್ನು ಹೊರಟ್ಟಿಯವರು ಓದಿಕೊಳ್ಳುವುದೊಳಿತು.

## ಭದ್ರಾ ಅಣೆಕಟ್ಟು ದುರಸ್ತಿ

ಭದ್ರಾ ಅಣೆಕಟ್ಟುಕಟ್ಟಿದ ಕೆಲವೇ ವರ್ಷದೊಳಗಾಗಿಯೇ ರಿಪೇರಿ ಮಾಡಬೇಕಾಗಿ ಬಂದಿರುವುದು ಕಾಂಗ್ರೆಸ್ ಆಡಳಿತೆಯ ವೈಖರಿಯನ್ನು ಬಯಲುಮಾಡಿದೆ. ಭ್ರಷ್ಟರಾಜಕಾರಣಿಗಳು, ಅಧಿಕಾರಿಗಳು, ಕಾಂಟ್ರಾಕ್ಟರರೆಲ್ಲ ಕೂಡಿ ರಾಜ್ಯದ ಯೋಜನೆಗಳನ್ನು ಕಾರ್ಯಗತಗೊಳಿಸುವಾಗ ಎಷ್ಟು ಹಣ ನುಂಗಿದ್ದಾರೆಂಬ ಕರ್ಮಕತೆಯನ್ನು ಲೆಕ್ಕಪತ್ರ ಸಮಿತಿ ತನ್ನ ವರದಿಯಲ್ಲಿ ಬಯಲುಪಡಿಸಿದೆ. ಇದರ ಕುರಿತು ಯೋಗ್ಯ ವಿಚಾರಣೆಯಾಗಬೇಕೆಂದೂ ಕೇಳಿಕೊಂಡಿದೆ. ಭದ್ರಾಯೋಜನೆ ಮುಂಚೆಯೇ ಮುಗಿದಿರುವುದರಿಂದ ಈ ವರದಿಯಲ್ಲಿ ಅದನ್ನು ನಮೂದಿಸಿರದಿದ್ದರೂ, ನೀರಾವರಿ ಯೋಜನೆಗಳಲ್ಲಿ ಎಷ್ಟು ಆಳವಾದ ಅವ್ಯವಹಾರ ಸೇರಿಕೊಂಡಿದೆಂಬ ಸಂಗತಿ ಬೆಳಕಿಗೆ ಬಂದಿದೆ. ನಾಲ್ಕು ಜಿಲ್ಲೆಗಳ ಲಕ್ಷಾವಧಿ ರೈತರಿಗೆ ನೀರೊದಗಿಸುವ ಭದ್ರಾಯೋಜನೆಯಲ್ಲಿ ಬಿರುಕುಬಿಟ್ಟಿದೆಂಬ ಸಂಗತಿ ಹೋದ ವರ್ಷದಿಂದಲೂ ಬಹಿರಂಗ ಚರ್ಚೆಯ ವಿಷಯವಾಗಿದೆ. ಅಣೆಕಟ್ಟಿನ ನೀರನ್ನೆಲ್ಲ ಖಾಲಿಮಾಡಿ ರಿಪೇರಿ ಮಾಡಬೇಕೆಂದು ತಜ್ಞರ ಅಭಿಪ್ರಾಯ. ಅಣೆಕಟ್ಟು ಖಾಲಿಮಾಡಿದ್ದಾದರೆ, ಸಾವಿರಾರು ಎಕರೆಗಳ ಬೆಳೆ ಒಣಗಿ ಕೋಟ್ಯಾವಧಿ ರೂಪಾಯಿ ಹಾನಿಯಾಗುತ್ತದೆಂದು ರೈತರ ತಕರಾರು. ಈ ವರ್ಷ ನವೆಂಬರ್ 16ರಿಂದ ಜಲಾಶಯದ ನೀರನ್ನು ಹೊರಬಿಟ್ಟು ಫೆಬ್ರುವರಿಯಲ್ಲಿ ಖಾಲಿಮಾಡಿ, ಮೇ ಅಂತ್ಯದೊಳಗೆ ರಿಪೇರಿ ಕಾರ್ಯ ಮುಗಿಸಲಾಗುವುದೆಂದು ವಿಧಾನಪರಿಷತ್ತಿನಲ್ಲಿ ಮಂತ್ರಿಯವರ ಹೇಳಿಕೆ. ರಿಪೇರಿಗಾಗಿ 220ಲಕ್ಷ ರೂ. ಖರ್ಚುಮಾಡಲಾಗುವುದಂತೆ. ಕೃಷ್ಣಾ ಮತ್ತಿತರ ನೀರಾವರಿಯೋಜನೆಗಳ ಕಾರ್ಯದ ವೇಗವನ್ನು ನೋಡುತ್ತಿರುವಾಗ, ಭದ್ರಾಜಲಾಶಯದ ರಿಪೇರಿ 1982ಮೇ ದಾಟಿ 1983 ಮೇಗಾದರೂ ಮುಗಿಯಬಹುದೋ, ಹಾಗೆಯೇ ಬೆಲೆಯೇರಿಕೆ, ಭ್ರಷ್ಟಾಚಾರದ ಈ ಯುಗದಲ್ಲಿ ರೂ. 220ಲಕ್ಷದಿಂದ ರೂ. 440ನ್ನೂ ದಾಟುತ್ತದೋ ಎಂಬ ಗ್ಯಾರಂಟಿಯನ್ನು ಯಾವ ತಜ್ಞನೂ ಮಂತ್ರಿಯೂ ಕೊಡುತ್ತಿಲ್ಲ. ಕೊಟ್ಟರೂ ಅದಕ್ಕೆ ಯಾರೂ ಭಾದ್ಯಸ್ಥರಲ್ಲವೆಂಬುವನ್ನು ಗುಂಡೂರಾವ್ ಸರಕಾರ ತೋರಿಸಿಕೊಟ್ಟಿಲ್ಲವೇ?

## ಮಲೆನಾಡು ಬೆಳವಣಿಗೆಗೆ ಗಮನ

ಮಲೆನಾಡು ಬೆಳವಣಿಗೆಗೆ ಗಮನ ಕೊಡಲಾಗುವುದೆಂಬ ಭರವಸೆಯನ್ನು ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದ ಕಾಲದಿಂದಲೂ ಕೊಡಲಾಗುತ್ತಿದೆ. ಭರವಸೆ ಕೊಡುವುದರಲ್ಲಿ ಧಾರಳ ತಜ್ಞತೆ ಪಡೆದ ಕಾಂಗ್ರೆಸ್ ಮಂತ್ರಿಗಳು ತಮ್ಮ ಹುಸಿಗುಂಡಿಗೆ ಜನತೆಯಿಂದ ಹಸಿಗುಂಡು ಹಾರಲ್ಪಡುವುದಿಲ್ಲೆಂಬ ಗ್ಯಾರಂಟಿ ಅಭಿಪ್ರಾಯ ಪಡೆದಿದ್ದಾರೆ. ಚರಿತ್ರೆಯೂ ಅದನ್ನು ತೋರಿಸಿಕೊಟ್ಟಿದೆ. ಈ ಮುಂಚೆ ಮಲೆನಾಡು ಪ್ರದೇಶದವರಾದ ಬದ್ರಿನಾರಾಯಣರವರೇ ಸ್ವತಃ ಮಂತ್ರಿಯಾಗಿದ್ದಾಗಲೂ ಮಲೆನಾಡು ಪ್ರದೇಶದ ಅಭಿವೃದ್ಧಿಗಾಗಿ ಪ್ರತ್ಯೇಕ ಕಮಿಷನ್ ನೇಮಿಸಲಾಗುವುದೆಂಬ ಭರವಸೆ ಹುಸಿಯಾಗಿತ್ತು. ಈಗ ಮತ್ತೆ ವಿಧಾನಪರಿಷತ್ತಿನಲ್ಲಿ ಭರವಸೆ ನೀಡಲಾಗಿದೆ. ಇದು ಬರೇ ಹಳೇ ರಾಗವಲ್ಲದೆ ಮತ್ತೇನಲ್ಲ ಎಂದು ಜನರು ಈಗಾಗಲೇ ತಿಳಿದುಕೊಂಡಿದ್ದಾರೆ. ಇವಕ್ಕೆಲ್ಲ ಪರಿಹಾರ ಜನತಾ ಚಳುವಳಿ.

–ಎನ್ಕೆ

## ಯುವಕ ಮಂಡಲದ ಸಭೆ

ಮಂಗಳೂರು ತಾಲ್ಲೂಕಿನ ಜಪ್ಪಿನಮೊಗ್ರು ಗ್ರಾಮ ಯುವಕ ಮಂಡಲದ 18ನೇ ವಾರ್ಷಿಕ ಮಹಾಸಭೆಯು 20-7-81ರಂದು ಜಿ. ಚಂದ್ರಹಾಸನವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯದರ್ಶಿ ಬಾಲಕೃಷ್ಣಶೆಟ್ಟಿಯವರು ವರದಿ ಹಾಗೂ ಲೆಕ್ಕಪತ್ರವನ್ನು ಸಭೆಯಲ್ಲಿ ಮಂಡಿಸಿದರು.

ಮುಂದಿನ ವರ್ಷಕ್ಕೆ ಈ ಕೆಳಗಿನವರು ಪದಾಧಿಕಾರಿಗಳಾಗಿ ಆಯ್ಕೆಗೊಂಡರು. ಸದಾಶಿವ ಕಾರ್ಪೆಂಟರ್ ಅವರು ಅಧ್ಯಕ್ಷರಾಗಿ, ಕೆ. ದೇವಪ್ಪ ಉಪಾಧ್ಯಕ್ಷರಾಗಿ ಹಾಗೂ ಕಾರ್ಯದರ್ಶಿಯಾಗಿ ರಮೇಶ ಸುಲಾಯರು ಚುನಾಯಿತರಾದರು. ○

## ಶಿಕ್ಷಣ ರಂಗದಲ್ಲಿ ಕ್ರಾಂತಿಕಾರಕ ತಿರುವು....

(3ನೇ ಪುಟದಿಂದ)

ಅನುಮಾನ, ಬ್ರಾಹ್ಮಣನಿಗೆ ಸ್ಥಳೀಯ ರಾಜನ ಬಗ್ಗೆ ಭಯವಿರಬಹುದೆ? ತೋರಿಸಿದ್ದು ಮಾತ್ರ, ಅದನ್ನು ಮಾರುವ, ಕೊಡುವ, ಬಿಡುವ, ಯಾವ ಸಂಗತಿಯೂ ಇಲ್ಲ. ಬ್ರಾಹ್ಮಣ ಕಿರಾತನ ಮೂಲಕ ಕಿರೀಟಾದಿಗಳನ್ನು ಮಾರಿಸುವ ಯೋಚನೆ ಮಾಡಿರಬಹುದು. ಬಡವನಾದ ಕಿರಾತನನ್ನು ಬ್ರಾಹ್ಮಣ ದುರುಪಯೋಗಿಸಿಕೊಳ್ಳಲೆತ್ನಿಸಿರಬಹುದು.

7) ಈ ಸಂದರ್ಭದಲ್ಲಿ ಕಥೆ ತಕ್ಷಣ ಮುನ್ನೆಗೆದು, ಈ ಯಾವ ಆಲೋಚನೆಗೂ ಆಸ್ಪದ ಕೊಡದಂತೆ ಕಿರಾತನನ್ನು ನೀಚ ಎಂದೆಲ್ಲಾ ಬಯ್ಯಲು ಶುರು ಮಾಡುತ್ತೆ. ಅವಿವೇಕಿಯಾಗಿ, ತನಗೆ ಹಿತಬಯಸಿದ ಬ್ರಾಹ್ಮಣನಿಗೆ ಅಹಿತ ಮಾಡಿದ ಕೃತಘ್ನ ಎಂದು. ಈ ಘಟ್ಟಕ್ಕೆ ಬಂದಾಗ ತಕ್ಷಣ ನಮಗೆ ಅನುಮಾನ ಬರುವುದೇನೆಂದರೆ, ಬೇಡ ಬ್ರಾಹ್ಮಣನನ್ನು ಕೊಂದು ಆಭರಣಗಳನ್ನೇನಾದರೂ ದೋಚಿದನೇ ಎಂದು.

8) ಆದರೆ ಕ್ಷಮೆಇರಲಿ. ಬಹುಶಃ ತಿನ್ನಲಿಕ್ಕೂ ಗತಿಯಿಲ್ಲದ ಆ ನಮ್ಮ ಬೇಡ ಹಾಗೆ ದುಷ್ಟ ಯೋಚನೆ ಮಾಡಲಿಲ್ಲ. ಅವನು ರಾಜನಿಷ್ಠ. ರಾಜಶಾಹಿಗೆ ಮೋಸ ಬಗೆಯದೆ ಕಿರೀಟಾದಿಗಳನ್ನು ತಂದ ಬ್ರಾಹ್ಮಣನ ಬಗ್ಗೆ ಅನುಮಾನಪಟ್ಟು, ರಾಜನ ಹತ್ತಿರ ಹೋಗಿ, "ದೇವಾ ನಿಮ್ಮ ಅಮೂಲ್ಯ ಆಭರಣಗಳನ್ನು ತಂದ ಬ್ರಾಹ್ಮಣ ನನ್ನ ಮನೆಯಲ್ಲಿದ್ದಾನೆ' ಎಂದು ಹೇಳಿದ. ಕಿರಾತ ಬ್ರಾಹ್ಮಣನ ಪರವಾಗಿ ನಿಲ್ಲದೆ, ರಾಜನಿಗೆ ಪರವಾಗಿ ನಿಂತ ಬಗ್ಗೆ ಲೇಖಕನಿಗೆ ವಿಪರೀತ ಸಿಟ್ಟು ಬಂದಿರುವುದು ಸ್ಪಷ್ಟ. ಕಿರೀಟಾದಿಗಳು ರಾಜನವೇ ಆಗಿದ್ದು; ಬೇಡ ಹೇಳಿರುವುದು ಕಿರಾತನ ಪ್ರಾಮಾಣಿಕ ರಾಜನಿಷ್ಠೆ.

ಹೆಚ್ಚಿನ ತರ್ಕಗಳನ್ನು ಬಿಟ್ಟರೂ; ಕಥೆಯ ಚೌಕಟ್ಟಿನ ಒಳಗಡೆಯೇ ಮೂಡುವ ಪ್ರಶ್ನೆಗಳನ್ನು ನೋಡಿದರೆ ಕಥೆಯ ಮೋಸ ತಿಳಿಯುತ್ತೆ.

9) ಹಾವಿನ ಮೂಲಕ, ರಾಜಕುಮಾರನನ್ನು ಬದುಕಿಸಲು ಹೊರಬಂದ ಶಿವಭೂತಿ. ಈತನನ್ನು ರಕ್ಷಿಸಲು ಹಾವು ಮುಂತಾದ ಪ್ರಾಣಿಗಳೂ ಯತ್ನಿಸಿವೆ. ಆದರೆ ಬೇಡನಿಗೆ ಎಲ್ಲವೂ 'ವೈರಿಗಳು'. ರಾಜನೂ ಅವನಿಗೆ ವೈರಿ ಆಗುವನು. ರಾಜ ತನ್ನ ಮಗನನ್ನು ಬದುಕಿಸಿದ ಶಿವಭೂತಿಯ ಬಗ್ಗೆ ಎಲ್ಲಿಲ್ಲದ ಆದರ ಗೌರವ, ವಿಶ್ವಾಸತೋರಿ, ಹಿಂದುಮುಂದು, ನ್ಯಾಯ ಅನ್ಯಾಯ ನೋಡದೆ, ಕಿರಾತನ ಉಪಕಾರ ಸ್ಮರಿಸದೆ ಅವನನ್ನು ಕೊಲ್ಲುತ್ತಾನೆ. ಬ್ರಾಹ್ಮಣನ ವಿರುದ್ಧ, ರಾಜನ ಪರವಾಗಿ ಮಾಡಿದ ಬೇಡನ ಒಂದು ಸಣ್ಣ ಕೆಲಸವೂ ಕಿರಾತನ ಪ್ರಾಣವನ್ನೇ ತೆಗೆಯುತ್ತೆ.

10. ಇಂಥ ನೂರೆಂಟು ಪ್ರಶ್ನೆಗಳಿಗೆ ಸಹಜ ವಿಚಾರಗಳಿಗೆ ಅವಕಾಶ ಕೊಡದಂತೆ ಲೇಖಕ ಜಾರಿಕೊಳ್ಳುತ್ತಲೇ ಹೋಗಿ, ತನ್ನ ಪೂರ್ವ ನಿರ್ಧಾರಿತ ನೀತಿಯನ್ನು ಪ್ರತಿಪಾದಿಸುವನು. ಕಥೆ ಎಲ್ಲಿಲ್ಲದ ಅವಸರದಲ್ಲಿ ಮುಗಿಯುತ್ತೆ, 'ಆತುಗೆ ಕಿರಾತು ನಿಂದಾವಸ್ಥೆಯು ಕೇಳ್ದು, ಆ ಕಿರಾತನು ಯಮಪುರಕ್ಕೆ ಕಳುಹಿದು' ಎಂದು. ರಾಜ ಬೇಡನ ಸಾಚಾತನ ಉಪಕಾರಕ್ಕೆ ಪ್ರತಿಯಾಗಿ ಜೀವ ತಗೊಂಡು ನೀಚವಾಗುವನು.

ಎಷ್ಟಾದರೂ ರಾಜಶಾಹಿ, ಪುರೋಹಿತಶಾಹಿಗಳು ಮೂಲಭೂತ ಹಿತಾಸಕ್ತಿಯಲ್ಲಿ ಒಂದೇ ಆಗಿ ಉಳಿಯುತ್ತವೆಯಲ್ಲವೆ ?

ಅಂತೇ

1) ಕಥೆ ಹೇಳುವಂತೆ ಬೇಡ ಕೃತಘ್ನನಾದುದು ಹೇಗೆ ?

2) ಕಥೆಯು ನೀತಿಗೂ ಮತ್ತು ಕಥೆಗೂ ಸಂಬಂಧ ಇದೆಯೆ ?

3) ಎಲ್ಲ ಜಾತಿಗಳಲ್ಲೂ ನೀಚರು, ದುಷ್ಟರು, ಕೃತಘ್ನರು ಇರುತ್ತಾರೆ. ಆದರೆ ಈ ಪಾಠದಲ್ಲಿ ನೀಚ, ಕೃತಘ್ನ ದುಷ್ಟನಲ್ಲದ ಕಿರಾತನನ್ನು ಲೇಖಕ ಆ ಎಲ್ಲ ಆರೋಪ, ಅಪಖ್ಯಾನ ಹೊರಿಸಿ ಅವನ ಮಾನನಷ್ಟ, ಜೀವ ನಷ್ಟ ಮಾಡಿದ್ದಾನೆ. ಇದು ಒಬ್ಬ ಬೇಡನ ಮೇಲಾದ ಅನ್ಯಾಯವಲ್ಲ, ಮೇಲ್ಜಾತಿ, ಮೇಲ್ವರ್ಗಗಳುಮಾಡುತ್ತ ಬಂದ ಅನ್ಯಾಯ ಪರಂಪರೆಗೆ ಒಂದು ಸಾಕ್ಷಿ.

4) ಇಂಥ ಅಸಂಬದ್ಧ ಕಲ್ಪನೆ, ಕುತರ್ಕ, ಸಂಪ್ರದಾಯಿಕ ಮೋಸ, ದರಿದ್ರ ನಂಬಿಕೆಗಳನ್ನು ಒಳಗೊಂಡ, ಪುರೋಹಿತಶಾಹಿ, ರಾಜಶಾಹಿ ಪರವಾದ ಈ ಕಥೆಯನ್ನು ಯಾವ ದೃಷ್ಟಿಯಿಂದ ಓದಬೇಕು ? ಕಲಿಸಬೇಕು ? ಸಂಪಾದಕರು ಮಾರ್ಗದರ್ಶನ ಮಾಡಿದಂತೆಯೆ ?

5. ಯಜಮಾನ ಸಂಸ್ಕೃತಿಯ ಕೀಳು ಮೋಸ, ಅವೈಚಾರಿಕತೆ ಅಪಾಯಕಾರಿ ಇಂಥ ಪಾಠವೇ ಏನು, ವಿದ್ಯಾರ್ಥಿಗಳ "ಅಭಿರುಚಿ ತಿದ್ದುವ", "ಆಧುನಿಕ ದೃಷ್ಟಿಯ" ವಿಚಾರಪರ ಆದರ್ಶ ಸಾಧನೆ ?

6) ಇಂಥ ಪಾಠಗಳನ್ನು ಎಷ್ಟೊ ಎಚ್ಚರಿಕೆಯಿಂದ ಓದಬೇಕಾಗುತ್ತದೆ... ಇಂಥ ಶಿಕ್ಷಣ ಪದ್ಧತಿಯ ವಿರುದ್ಧವೇ ಶಿಕ್ಷಕರು, ವಿದ್ಯಾರ್ಥಿಗಳು ಸಿಡಿದೇಳಬೇಕಾಗಿದೆ.

ಆಧುನಿಕ ಜಗತ್ತಿನಲ್ಲಿ ನಮ್ಮ ದೇಶದ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸಂದರ್ಭಗಳ ಅವಶ್ಯಕತೆಯನ್ನು ಅನುಲಕ್ಷಿಸಿ, ಕ್ರಾಂತಿಕಾರಿ ತಿರುವು ತರುವಲ್ಲಿ ಇಂಥ ಚಳುವಳಿಗಳಿಂದ ಮಾತ್ರ ಸಾಧ್ಯಮಾಡಿಯಾವು.

○

## ಸುಗ್ರೀವಾಜ್ಞೆಯ ಖಂಡನೆ

31-7-81ರಂದು ದಾಂಡೇಲಿಯ ವೆಸ್ಟ್‌ಕೋಸ್ಟ್ ಪೇಪರ್‌ಮಿಲ್ ಕಾರ್ಮಿಕ ಸಂಘದ ಕಾರ್ಯಕಾರಿ ಸಭೆ ನಡೆದು ರಾಷ್ಟ್ರಪತಿಯವರು ಹೊರಡಿಸಿದ ಅಗತ್ಯ ಸೇವಾ ಸುಗ್ರೀವಾಜ್ಞೆಯನ್ನು ಉಗ್ರವಾಗಿ ಖಂಡಿಸಲಾಯಿತು. ○

REG. KRNB-368 MAG (2) PRB DECR 319/78-79 ಆಗಸ್ಟ್ 9, 1981

# ಪ. ಬಂಗಾಲ ಎಡರಂಗ ಸರಕಾರದ ನಾಲ್ಕು ದಿನಗಳ ಕಾರ್ಯಕ್ರಮ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿರುವ ಪಶ್ಚಿಮ ಬಂಗಾಲ ಎಡರಂಗ ಸರಕಾರವು ನಾಲ್ಕು ವರ್ಷಗಳ ಅವಧಿಯನ್ನು ಯಶಸ್ವಿಯಾಗಿ ಪೂರೈಸಿದೆ. ಈ ಸಂದರ್ಭದಲ್ಲಿ ತನಗಿರುವ ಸೀಮಿತ ಅವಕಾಶದಲ್ಲಿ ಜನತೆಯ ಏಳ್ಗೆಗೋಸ್ಕರ ತಾನು ಮಾಡಿರುವ ಅಪಾರ ಸಾಧನೆಗಳನ್ನು ದೇಶದ ಇತರ ಭಾಗದ ಜನತೆಗೆ ಮನಗಾಣಿಸಲು ಪ. ಬಂಗಾಲ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯವರು ಬೆಂಗಳೂರಿನಲ್ಲಿ ವಸ್ತುಪ್ರದರ್ಶನವೊಂದನ್ನು ಏರ್ಪಡಿಸಿದ್ದರು. ಸೋಮವಾರ (3-8-81) ದಿಂದ ಗುರುವಾರ (6-8-81)ದ ವರೆಗೆ ನಡೆದ ಕಾರ್ಯಕ್ರಮ ಉದ್ಬೋಧಕವಾಗಿತ್ತು.

3-8-81ರಂದು ಸಂಜೆ 5-30 ಘಂಟೆಗೆ ಪ್ರಾರಂಭವಾದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಯುವಜನ ಮಂತ್ರಿ ಶ್ರೀ ಗಂಗಾಧರಗೌಡರು ವಹಿಸಿದ್ದರು. ಸಭೆಯನ್ನುದ್ದೇಶಿಸಿ ಸಿ. ಪಿ. ಐ.ಯ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ. ಎಂ. ಎಸ್. ಕೃಷ್ಣನ್, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಇವರು ಮಾತನಾಡಿ ಪ. ಬಂಗಾಲ ಎಡರಂಗಕ್ಕೆ ಶುಭಕೋರಿದರು. ಪೌರಾಡಳಿತ ಮತ್ತು ನಗರಾಭಿವೃದ್ಧಿ ಸಚಿವ ಕಾಂ. ಪ್ರಶಾಂತಸೂರ್ ಅವರು ಪಶ್ಚಿಮ ಬಂಗಾಲ ಎಡರಂಗದ ಪರವಾಗಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಪ್ರತಿಯೊಂದು ರಂಗದಲ್ಲಿ ಪ. ಬಂಗಾಲ ಸರಕಾರ ಸಾಧಿಸಿರುವ ಸಾಧನೆಗಳನ್ನು ಅಂಕಿ ಅಂಶ ಸಮೇತ ತಿಳಿಸಿದರು. ನಂತರ "ಹೊಸಕ್ಷಿತಿಜ" ಮತ್ತು ಸತ್ಯಜಿತ್‌ರಾಯರ ಹೀರಾಕ್ ರಾಜ್‌ರ್ ದೇಶ್ ಎಂಬ ಕಿರು ಚಿತ್ರಗಳನ್ನು ಪ್ರದರ್ಶಿಸಲಾಯಿತು.

4-8-81ರಂದು ಭಾರತ ದೇಶಕ್ಕೊಂದು ಪರ್ಯಾಯ ಎಂಬ ವಿಷಯದ ಮೇಲೆ ನಡೆದ ವಿಚಾರಸಂಕಿರಣದ ಅಧ್ಯಕ್ಷತೆಯನ್ನು ಕಾಂ. ವಿ. ಜೆ. ಕೆ. ನಾಯರ್ ವಹಿಸಿದ್ದರು. ವಿಚಾರ ಸಂಕಿರಣದಲ್ಲಿ ಖ್ಯಾತ ಶಿಕ್ಷಣತಜ್ಞ ಶ್ರೀ ರಾಮಕೃಷ್ಣ, ಕನ್ನಡಪ್ರಭ ಪತ್ರಿಕೆಯ ಸಂಪಾದಕ ಶ್ರೀ ಖಾದ್ರಿಶಾಮಣ್ಣ, ಜನತಾ ಪಕ್ಷದ ಶಾಸಕ ಶ್ರೀ ಪಿ. ರಾಮದೇವ ಇವರುಗಳು ಪಾಲ್ಗೊಂಡಿದ್ದರು. ವಿಚಾರಸಂಕಿರಣದಲ್ಲಿ ಭಾಗಿಯಾಗಿದ್ದ ಎಲ್ಲರೂ ಪ. ಬಂಗಾಲದ ಸಾಧನೆಗಳನ್ನು ಗುರುತಿಸಿದರಲ್ಲದೇ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಮಾತ್ರ ದೇಶಕ್ಕೆ ಪರ್ಯಾಯಶಕ್ತಿಯಾಗಬಲ್ಲವು ಎಂದು ಅಭಿಪ್ರಾಯಪಟ್ಟರು. ನಂತರ ಮೃಣಾಲ್ ಸೇನ್‌ರ "ಪರಶುರಾಮ" ಎಂಬ ಚಲನಚಿತ್ರ ಪ್ರದರ್ಶಿಸಲಾಯಿತು. ಪರಶುರಾಮ ಚಿತ್ರವು ಸಭಿಕರ ಮನಸ್ಸೆಳೆಯಿತು.

5-8-81ರಂದು ಶ್ಯಾಮಾ ಎಂಬ ನೃತ್ಯನಾಟಕ ಮತ್ತು 6-8-81ರಂದು ಜಾನಪದ ನೃತ್ಯಗಳನ್ನು ಏರ್ಪಡಿಸಿತ್ತು.

ನಾಲ್ಕು ದಿನಗಳ ಕಾರ್ಯಕ್ರಮದಲ್ಲಿ ಬೆಂಗಳೂರು ಜನತೆ ಟೌನ್‌ಹಾಲ್‌ನಲ್ಲಿ ಕಿಕ್ಕಿರಿದು ನೆರೆದಿದ್ದು ಎಡರಂಗ ಸರಕಾರದ ಸಾಧನೆಗಳನ್ನು ಕುರಿತಿದ್ದ ವಸ್ತುಪ್ರದರ್ಶನ ವೀಕ್ಷಿಸಿದರು. ಎಡರಂಗ ಸರಕಾರ ಉಳಿದು, ಬೆಳೆಯಲಿ ಎಂದು ಆಶಿಸಿದರು.

●

## ಪ್ರತಿಸ್ಪರ್ಧಿ ಎ.ಐ.ಸಿ.ಸಿ.ಗೆ ರಾಮ್ ಅಧ್ಯಕ್ಷ

(1ನೇ ಪುಟದಿಂದ)

ಕರ್ನಾಟಕ, ಕೇರಳ, ಮಹಾರಾಷ್ಟ್ರ ಮತ್ತು ಸ್ವಲ್ಪಮಟ್ಟಿಗೆ ಬಿಹಾರದಂತಹ ರಾಜ್ಯಗಳಲ್ಲಿ ಸ್ವಲ್ಪ ಜನಬೆಂಬಲವನ್ನು ಪಡೆದಿರುವ ಕಾಂಗ್ರೆಸ್(ಯು) ಉತ್ತರ ಭಾರತದಲ್ಲಿ ಇರುವ ಅಲ್ಪ ಸ್ವಲ್ಪ ಬೆಂಬಲ ಮತ್ತು ಸಂಘಟನೆಯನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿದೆ. ಉತ್ತರ ಭಾರತದಲ್ಲಿ ಈ ಪಕ್ಷಕ್ಕೆ ಇದ್ದಿರುವ ಅಲ್ಪಸ್ವಲ್ಪ ಜನಬಲವು ರಾಮ್ ಅವರ ಪ್ರತಿಸ್ಪರ್ಧಿ ಕಾಂಗ್ರೆಸ್‌ಗೆ ದೊರೆಯುವಂತಿದೆ. ಪ್ರತಿಸ್ಪರ್ಧಿ ಎ.ಐ.ಸಿ.ಸಿ. ಸಭೆಗೆ ಹಾಜರಾದ ಪ್ರತಿನಿಧಿಗಳು ಬಂದಿರುವುದು ಉತ್ತರಭಾರತದ ರಾಜ್ಯಗಳಿಂದಲೇ ಎಂಬುದು ಗಮನೀಯ. ಆಡಳಿತದ ರುಚಿಯನ್ನುಂಡವರ ಅಧಿಕಾರ ಲಾಲಸೆ ಮತ್ತು ಸಂದರ್ಭ ಸಾಧಕ ನೀತಿಗಳಿಂದ ಮತ್ತು ಸ್ಪಷ್ಟ ಧೋರಣೆಗಳ ಅಭಾವದಿಂದ ನರಳುತ್ತಿರುವ ಇಂದಿನ ಬಂಡವಾಳಶಾಹಿ ರಾಜಕೀಯ ವ್ಯವಸ್ಥೆಯೊಳಗೆ ಸಿಕ್ಕಿ ಹಾಕಿಕೊಂಡಿರುವುದು ಕಾಂಗ್ರೆಸ್ (ಯು) ಒಂದೇ ಅಲ್ಲ; ದೇಶವನ್ನಾಳುವ ಇಂದಿರಾ ಕಾಂಗ್ರೆಸ್‌ನ ಒಳಜಗಳ ನೋಡಿದರೆ ಇದು ಅರ್ಥವಾಗುತ್ತದೆ.

○

## ಮುಷ್ಕರ ಪ್ರತಿಬಂಧಕಾಜ್ಞೆಗೆ ವಿರೋಧ

ಬಿಜಾಪುರ ನಗರಸಭೆ, ಜೀವ ವಿಮೆ, ಬ್ಯಾಂಕ್, ಕೆ. ಇ. ಬಿ., ಕೆ.ಎಸ್.ಆರ್.ಟಿ.ಸಿ., ನೂಲಿನ ಗಿರಣಿ ಮೊದಲಾದ 19 ಕಾರ್ಮಿಕ ಸಂಘಗಳ ಹಾಗೂ ಸಿ. ಪಿ. ಎಂ., ಸಿ.ಪಿ.ಐ., ಜನತಾ, ಕಾಂಗ್ರೆಸ್ (ಯು),ಬಿ,ಜೆ.ಪಿ. ಪಕ್ಷಗಳ ಸಭೆ 31-7-81ರಂದು ಸೇರಿ, ಯಾವುದೇ ಅಗತ್ಯಸೇವಾ ವ್ಯವಸ್ಥೆಯಲ್ಲಿನ ಕಾರ್ಮಿಕರು ಮುಷ್ಕರ ಹೂಡುವುದನ್ನು ನಿಷೇಧಿಸುವ ರಾಷ್ಟ್ರಾಧ್ಯಕ್ಷರ ಸುಗ್ರೀವಾಜ್ಞೆಯನ್ನು ಬಲವಾಗಿ ಖಂಡಿಸಲಾಯಿತು. ಕಾರ್ಮಿಕ ಮುಖಂಡರಾದ ಎನ್. ಕೆ. ಉಪಾಧ್ಯಾಯರು ಅಧ್ಯಕ್ಷತೆ ವಹಿಸಿದ್ದರು. ಕಾಂ. ನಾಗರಾಣ, ಚಂಚಲಕರ, ಭೀಮಸಿಕಲಾದಗಿ, ಲಮಾಣಿ, ಕುಲಕರ್ಣಿ ಮೊದಲಾದವರು ಸುಗ್ರೀವಾಜ್ಞೆಯನ್ನು ವಿರೋಧಿಸಿ ಮಾತನಾಡಿದರು.

ಶಾಸಕ ಐ. ಪಿ. ಡಿ. ಸಾಲಪ್ಪನವರ ಮೇಲೆ ಎಫ್. ಎಂ. ಖಾನ್ ಬೆಂಬಲಿಗರು ನಡೆಸಿದ ದಬ್ಬಾಳಿಕೆಯನ್ನೂ, ಸಿಂದಗಿ ನಗರಸಭೆಯ ಚೀಫ್ ಆಫೀಸರರಾದ ಮರಿಗೌಡರ ಮೇಲೆ ನಗರಸಭೆ ಅಧ್ಯಕ್ಷ ಮತ್ತು ಸದಸ್ಯರು ನಡೆಸಿದ ಹಿಂಸಾಚಾರವನ್ನೂ, ಬಿಜಾಪುರದ ತ್ರಿವೇಣಿ ಹೋಟೆಲಿನ ಮಾಲಕರ ಮೇಲೆ ಪೋಲೀಸರ ಪ್ರಚೋದನೆಯಿಂದ ನಡೆಸಲಾದ ಅಮಾನುಷ ದಬ್ಬಾಳಿಕೆಯನ್ನೂ ಈ ಸಭೆಯಲ್ಲಿ ಖಂಡಿಸಲಾಯಿತು.

○


## ಸಂಪಾದಕೀಯ

(1ನೇ ಪುಟದಿಂದ)

ಶ್ರೀಮತಿ ರೇಣುಕಾರಾಜೇಂದ್ರನ್‌ರವರು ಹರಿಜನ ಮಂತ್ರಿಯಾದುದರಿಂದ ಅವರನ್ನು ರಾಜೀನಾಮೆಕೊಡಲು ಒತ್ತಾಯಿಸಿದೆಂದಾಗ, ಇಬ್ರಾಹಿಂರವರು ಅಲ್ಪಸಂಖ್ಯಾತರಾದುದರಿಂದ ಅವರ ರಾಜೀನಾಮೆಗೆ ಒತ್ತಾಯ ಬಂದುದೆಂದಾಗಲಿ ಹೇಳುವುದರಲ್ಲಿ ಹುರುಳಿಲ್ಲ. ಭ್ರಷ್ಟ ಮಂತ್ರಿಗಳು ಹೋಗಬೇಕೆನ್ನುವಾಗ ಈ ಪ್ರಶ್ನೆಯೇ ಬರುವುದಿಲ್ಲ.

ವಾಸ್ತವವಾಗಿ ಈಗಿರುವ ಮಂತ್ರಿಮಂಡಲವೇ ಹೋಗಬೇಕು; ಒಂದೆರಡು ಮಂತ್ರಿಗಳು ಹೋದರೆ ರಾಜ್ಯದ ಸಮಸ್ಯೆ ಬಗೆಹರಿಯದು; ಅದಕ್ಕೆ ಇಂದಿರಾ ಕಾಂಗ್ರೆಸ್ ಹೋಗಬೇಕು. ಇದು ಕನ್ನಡ ಜನತೆಯ, ಶ್ರಮಜೀವಿಗಳ, ಪ್ರಜಾಪ್ರಭುತ್ವವಾದಿಗಳ ಕರೆ. ಅದಕ್ಕೆ ಎಲ್ಲ ಎಡ ಮತ್ತು ಪ್ರಜಾಪ್ರಭುತ್ವಶಾಹಿ ಶಕ್ತಿಗಳೆಲ್ಲ ಒಂದಾಗಿ ಮುಂದುವರಿಯಲೆಂದು ನಮ್ಮ ಹಾರೈಕೆ.

## ಕಾಂ. ಭೂಪೇಶ್ ಗುಪ್ತ ನಿಧನ



ಪ್ರಸಿದ್ಧ ಸಂಸದೀಯಪಟು, ಕಮ್ಯುನಿಸ್ಟ್ ಪಕ್ಷದ ಹಿರಿಯ ನಾಯಕ ಕಾಂ. ಭೂಪೇಶ್‌ಗುಪ್ತರು ಮಾಸ್ಕೋದಲ್ಲಿ ಹೃದಯಾಘಾತದಿಂದ ಗುರುವಾರ (6-8-81) ನಿಧನರಾದ ಆಘಾತಕರ ವಾರ್ತೆ ಬಂದಿದೆ. ಉದರ ಬೇನೆಗಾಗಿ ಕಾಂ.ಗುಪ್ತರು ಚಿಕಿತ್ಸೆಗಾಗಿ ಮಾಸ್ಕೋಗೆ ತೆರಳಿದ್ದರು.

ಕಳೆದ 29 ವರ್ಷಗಳಿಂದ ರಾಜ್ಯಸಭಾ ಸದಸ್ಯರಾಗಿದ್ದ ಕಾಂ. ಭೂಪೇಶ್ ಗುಪ್ತರು ದುಡಿಯುವ ಜನತೆಯ ಪ್ರತಿನಿಧಿಯಾಗಿದ್ದರು. ಸಮಾಜವಾದದ ಕಟ್ಟಾಳಾಗಿದ್ದರು. ಕಾಂ. ಭೂಪೇಶ್‌ಗುಪ್ತರ ನಿಧನದಿಂದ ರಾಷ್ಟ್ರವು ಮಹಾನ್ ದೇಶಪ್ರೇಮಿಯನ್ನು ಕಳೆದುಕೊಂಡಿದೆ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ತನ್ನ ಶೋಕ ಸಂದೇಶದಲ್ಲಿ ತಿಳಿಸಿದೆ. ಇತ್ತೀಚಿನ ವರ್ಷಗಳಲ್ಲಿ ಕಮ್ಯುನಿಸ್ಟ್ ಚಳುವಳಿಯ ಒಗ್ಗೂಡುವಿಕೆ ಮತ್ತು ಎಡಶಕ್ತಿಗಳನ್ನೆಲ್ಲ ಒಂದುಮಾಡುವ ಯತ್ನದಲ್ಲಿ ಕಾಂ. ಭೂಪೇಶ್‌ಗುಪ್ತರ ಪಾತ್ರವನ್ನು ಪೊಲಿಟ್‌ಬ್ಯೂರೋ ಸ್ಮರಿಸಿದೆ.

ಈಗ ಬಾಂಗ್ಲಾದೇಶದಲ್ಲಿರುವ ಮೈಮೇನ್‌ಸಿಂಗ್ ಜಿಲ್ಲೆಯ ಇಟ್ನಾ ಎಂಬಲ್ಲಿ 1914ರಲ್ಲಿ ಜನಿಸಿದ್ದ ಕಾಂ. ಭೂಪೇಶ್‌ಗುಪ್ತರು ಚಿಕ್ಕ ವಯಸ್ಸಿನಿಂದಲೇ ಸ್ವಾತಂತ್ರ್ಯಹೋರಾಟದಲ್ಲಿ ಧುಮುಕಿದ್ದರು. ಅನೇಕ ವರ್ಷಗಳನ್ನು ಜೈಲಿನಲ್ಲಿ ಕಳೆದಿದ್ದರು.

1954ರಲ್ಲಿ ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಕೇಂದ್ರಸಮಿತಿಯ ಸದಸ್ಯರಾಗಿ ಆಯ್ಕೆಯಾಗಿದ್ದರು. 64ರಲ್ಲಿ ಪಕ್ಷ ಇಬ್ಭಾಗವಾದಾಗ ಕಾಂ. ಗುಪ್ತಾ ಸಿ. ಪಿ. ಐ. ಜೊತೆಗಿದ್ದರು. ಅಲ್ಲಿಂದೀಚೆ ಸಿ. ಪಿ. ಐ ನ ಕೇಂದ್ರ ಕಾರ್ಯಕಾರಿ ಮತ್ತು ಸೆಕ್ರೆಟಾರಿಯೇಟ್ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ಜನತೆಯ ನಿಜವಾದ ಆಶೋತ್ತರಗಳನ್ನು ಪ್ರತಿಬಿಂಬಿಸುತ್ತಿದ್ದ ಕಾಂ. ಭೂಪೇಶ್‌ಗುಪ್ತರ ನಿಧನದಿಂದ ರಾಷ್ಟ್ರಕ್ಕೆ ಅಪಾರ ನಷ್ಟವಾಗಿದೆ.

ಕಾಂ. ಭೂಪೇಶ್‌ಗುಪ್ತರ ನಿಧನದಿಂದ ಶ್ರಮಜೀವಿಗಳು ತಮ್ಮ ಹಿತಕ್ಕಾಗಿ ಹೋರಾಡಿದ ಒಬ್ಬ ನಾಯಕನನ್ನು ಕಳೆದುಕೊಂಡಂತಾಗಿದೆ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್‌ರವರು ತಮ್ಮ ಸಂತಾಪವನ್ನು ವ್ಯಕ್ತಪಡಿಸಿದ್ದಾರೆ.

## ಸಿ.ಐ.ಟಿ.ಯು. ರಾಜ್ಯಸಮಿತಿಯ ಸದಸ್ಯರ ಅವಗಾಹನೆಗೆ

ಸಿ. ಐ. ಟಿ. ಯು. ಕರ್ನಾಟಕ ರಾಜ್ಯಸಮಿತಿಯ ಸಭೆಯು ತಾ. 15-8-1981ರಂದು ಬೆಂಗಳೂರಿನಲ್ಲಿ ನಡೆಯುತ್ತದೆ. ಸಭೆಯ ನೋಟೀಸನ್ನು 29-7-81ರಂದು ಅಂಚೆಯ ಮೂಲಕ ಕಳುಹಿಸಲಾಗಿದೆ. ರಾಜ್ಯಸಮಿತಿಯ ಸದಸ್ಯರು ಅಂದು ಸಭೆಯಲ್ಲಿ ಭಾಗವಹಿಸಬೇಕೆಂದು ವಿನಂತಿ.

ಪದಾಧಿಕಾರಿಗಳ ಸಭೆಯು ತಾ. 14-8-81ರಂದು ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿನಲ್ಲಿ ನಡೆಯುತ್ತದೆ. ಪದಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಬೇಕೆಂದು ವಿನಂತಿ.

ಸಿ. ನಂಜುಂಡಪ್ಪ
ಪ್ರಧಾನಕಾರ್ಯದರ್ಶಿ
ಸಿ.ಐ.ಟಿ.ಯು. ಕರ್ನಾಟಕ ರಾಜ್ಯಸಮಿತಿ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT